ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ನವೆಂಬರ್-೨೦೧೩ ಸಂಚಿಕೆ-೪



ಬಂದಿತು ಚುನಾವಣಾ ಯುಗ, ನಮ್ಮ ಪಾತ್ರವೇನು ?

ಜನಪದ ವಿಚಾರದಲ್ಲಿ

ನವೆಂಬರ್ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್ - ೨೦೧೩
ಸಂಪುಟ - ೧೪
ಸಂಚಿಕೆ - ೪

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

08236 316344
08236 299854
e-mail : janapada@yahoo.com
web: janapada.net

ಕನ್ನಡದ ಬಾವುಟ

ಏರಿಸಿ, ಹಾರಿಸಿ, ಕನ್ನಡದ ಬಾವುಟ
ಓಹೋ! ಕನ್ನಡ ನಾಡು,
ಆಹಾ ಕನ್ನಡ ನುಡಿ!
ಹಾರಿಸಿ ತೋರಿಸಿ, ಕೆಚ್ಚೆದೆಯ ಬಾವುಟ!
ಗಾಳಿಯಲಿ ಪಟಪಟ,
ದಾಳಿಯಲಿ ಚಟಚಟ ಉರಿಯಿತೋ
ಉರಿಯಿತು ಹಗೆಯ ಹಟ,
ಮನೆ ಮಠ ಹಾಳ್‌ಹಾಳ್ ಸುರಿಯಿತು
ಹಗೆಯ ಬೀಡಕ್ಕಟ!
ಬಾಳ್ ಕನ್ನಡ ತಾಯ್!
ಏಳ್ ಕನ್ನಡ ತಾಯ್!
ಆಳ್ ಕನ್ನಡ ತಾಯ್!
ಕನ್ನಡಿಗರೊಡತಿ ಓ ರಾಜೇಶ್ವರೀ!

- ಬಿ.ಎಂ.ಶ್ರೀ

ಒಂದೇ ಕರ್ನಾಟಕ

ಒಂದೇ ಒಂದೇ ಒಂದೇ
ಕರ್ನಾಟಕ ಒಂದೇ
ಇಂದೇ ಮುಂದೇ ಒಂದೇ ಕರ್ನಾಟಕ
ಒಂದೇ
ಜಗದೇಳಿಗೆಯಾಗುವುದಿದೆ
ಕರ್ನಾಟಕದಿಂದೇ
ಕುಲವೊಂದೇ ಸ್ಥಲವೊಂದೇ
ನೀತಿಯನೆಲೆಯೊಂದೇ
ಹೀಗೆನ್ನದ ಹೆರವರು
ಅವರಿದ್ದರೂ ಒಂದೇ
ಇರದಿದ್ದರೂ ಒಂದೇ
ಕನ್ನಡ ಎಂದೂ ಒಪ್ಪದು
ಕರ್ನಾಟಕ ನಿಂದೇ
ಒಂದೇ ಒಂದೇ ಒಂದೇ
ಕರ್ನಾಟಕ ಒಂದೇ

- ಅಂಬಿಕಾತನಯ ದತ್ತ

ವಿಚಾರ ದೀಪ್ತಿ

ಯೂರೋಪ್‌ನಲ್ಲಿ ೨೩ ಭಾಷೆಗಳಿವೆ. ೨೩ ಭಾಷೆಗಳಲ್ಲಿಯೂ ಆಡಳಿತ ನಡೆಯುತ್ತಿದೆ. ಯೂರೋಪಿಗೆ ಇದು ಸಾಧ್ಯವಾಗುತ್ತಿದ್ದರೆ ಕನ್ನಡವನ್ನು ಕರ್ನಾಟಕದಲ್ಲಿ ಬಳಸಲಾಗುತ್ತಿಲ್ಲ, ಏಕೆ? ದೇಶಕ್ಕೊಂದು ಭಾಷೆಯೆಂದು ಹಿಂದಿಯನ್ನು ಸ್ವೀಕರಿಸುವಂತೆ ರಾಜ್ಯಕ್ಕೊಂದು ಭಾಷೆಯನ್ನು ಸ್ವೀಕರಿಸಲಾಗಿದೆ. ಆದರೆ ರಾಷ್ಟ್ರೀಯ ಭಾಷೆಯೊಂದಿಗೆ ಸ್ಥಳೀಯ ಭಾಷೆ ಬಳಕೆಯಾಗದೆ ಇರುವುದು ವಿಪರ್ಯಾಸ. ಕೇಂದ್ರ ಸ್ವಾಯತ್ತತೆಯ ಕಛೇರಿಗಳಲ್ಲಿ (ಅಂಚೆ, ಬ್ಯಾಂಕ್, ವಿಮೆ, ಪಾಸ್‌ಪೋರ್ಟ್ ಕಛೇರಿ, ರೈಲ್ವೆ..) ಹಿಂದಿಯೊಂದಿಗೆ ಇಂಗ್ಲಿಷನ್ನು ಬಳಸುವ ಬದಲು ಸ್ಥಳೀಯ ಭಾಷೆಗಳಿಗೆ ಆದ್ಯತೆಯನ್ನು ನೀಡಬೇಕು. ರೈಲ್ವೆ, ಅಂಚೆ, ಬ್ಯಾಂಕಿಂಗ್ ಮೊದಲಾದ ಸಂಸ್ಥೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸ್ಥಳೀಯ ಭಾಷೆಗೂ ಅವಕಾಶ ಕೊಟ್ಟು ನಮ್ಮ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಬೇಕು. ಇದರಿಂದ ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗುತ್ತದೆ. ಇದಕ್ಕೆ ಕನ್ನಡಿಗರ ಹೋರಾಟ, ಸ್ವಾಭಿಮಾನ, ಇಚ್ಛಾಶಕ್ತಿಯೂ ಅಗತ್ಯವಾಗಿದೆ ಮತ್ತು ಇದರಿಂದ ಜಾಗತೀಕರಣದ ಸಾವಲುಗಳನ್ನೂ ಸಹ ಸಮರ್ಥವಾಗಿ ಎದುರಿಸಬಹುದಾಗಿದೆ.

– *ಎಂ.ರೇಖಾ*

ಬಂದಿತು ಚುನಾವಣಾ ಯುಗ, ನಮ್ಮ ಪಾತ್ರವೇನು?

– *ಸುರೇಂದ್ರ ಕೌಲಗಿ*

ಅನಂತ ಕಾಲವನ್ನು ಆಯಾ ಕಾಲಧರ್ಮದ ನೀತಿಗನುಸಾರವಾಗಿ ನಾಲ್ಕು ಯುಗಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೆಯದು ಸತ್ಯಯುಗ, ಎರಡನೆಯದು ತ್ರೇತಾಯುಗ, ಮೂರನೆಯದು ದ್ವಾಪರಯುಗ, ನಾಲ್ಕನೆಯದು ಕಲಿಯುಗ. ಕಲಿಯುಗದ ಕೊನೆಯೆಂದೊ ಸರಿಯಾಗಿ ಗೊತ್ತಿಲ್ಲ, ಆದರೆ ಒಂದು ಯುಗದ ನಂತರ ಮತ್ತೊಂದು ಯುಗ ಬರುವ ಕ್ರಮವಿದ್ದರೆ ಕಲಿಯುಗದ ನಂತರದ ಯುಗ ಚುನಾವಣಾಯುಗ ಎಂದು ಅಂದಾಜಿಸಬಹುದು! ಭಾರತದಲ್ಲಿ ಪ್ರಜಾಪ್ರಭುತ್ವ ಆಳ್ವಿಕೆ ಪದ್ಧತಿ ಬಂದಾಗಿನಿಂದ ಚುನಾವಣೆ ಎಂಬುದು ಸರ್ವೇಸಾಮಾನ್ಯ ಸಂಗತಿಯಗಿದೆ. ಗ್ರಾಮಪಂಚಾಯಿತಿಯಿಂದ ಹಿಡಿದು ಲೋಕಸಭಾವರೆಗೆ ಚುನಾವಣೆಗಳು ವರ್ಷವಿಡೀ ಬೇರೆ ಬೇರೆ ಕಾಲದಲ್ಲಿ, ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಲೇ ಇರುತ್ತವೆ. ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಘಗಳು, ಎಲ್ಲಾ ಬಗೆಯ ಖಾಸಗಿ ಸಂಘ ಸಂಸ್ಥೆಗಳು, ಔದ್ಯೋಗಿಕ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು ಮುಂತಾದವುಗಳು ಕೂಡ ಚುನಾವಣೆಯ ಪ್ರಭಾವಕ್ಕೆ ಒಳಗಾಗಿರುತ್ತವೆ. ವರ್ಷವಿಡೀ ಚುನಾವಣೆಗಳು ನಡೆಯುತ್ತಲೇ ಇರುವುದರಿಂದ ಕಲಿಯುಗ ಚುನಾವಣಾಯುಗವೆಂಬ ಅನ್ವರ್ಥನಾಮಕ್ಕೆ ಅರ್ಹವಾಗಿದೆ. ಐದು ರಾಜ್ಯಗಳಲ್ಲಿ: ರಾಜಾಸ್ಥಾನ, ದೆಹಲಿ, ಮಧ್ಯಪ್ರದೇಶ, ಚತ್ತೀಸ್‌ಘಡ ಮತ್ತು ಮಿಜೋರಾಂಗಳಲ್ಲಿ ವಿಧಾನಸಭೆಗಳಿಗಾಗಿ ಚುನಾವಣೆ ಘೋಷಣೆಯಾದ ಬಳಿಕ ಭಾರತದಲ್ಲಿ ಚುನಾವಣಾಯುಗ ಪ್ರಾರಂಭವಾಯಿತೆಂದೇ ಹೇಳಬಹುದು. ಈ ಐದು ರಾಜ್ಯಗಳ ಚುನಾವಣೆ ಎರಡು ತಿಂಗಳ ಕಾಲಾವಧಿಗೂ ಹೆಚ್ಚುಕಾಲ ನಡೆಯುವುದು. ಅದು ಮುಗಿಯುತ್ತಿದ್ದಂತೆಯೇ ಇಡೀ ದೇಶ ಹದಿನೈದನೇ ಲೋಕಸಭಾ ಚುನಾವಣೆಗಾಗಿ ಸಿದ್ಧವಾಗಬೇಕಾಗುತ್ತದೆ. ಇನ್ನು ಮೇಲೆ ಕೆಂದ್ರ ಸರ್ಕಾರ ಏನೆಲ್ಲಾ ತೀರ್ಮಾನಗಳನ್ನು ಮಾಡುತ್ತದೊ ಮತ್ತು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೊ, ವಿರೋಧಪಕ್ಷಗಳು ಏನು ಮಾಡುತ್ತವೊ ಅವುಗಳಿಗೆಲ್ಲಾ ಚುನಾವಣಾ ಸ್ಪರ್ಷವಿರುವುದು. ದೇಶ ಚುನಾವಣಾ ನೀತಿ ಸಂಹಿತೆಯ ಒಳಗೆ ಮತ್ತು ಹೊರಗೆ ಓಡಾಡುತ್ತಲೇ ಇರುವುದು. ನಾಲ್ಕು ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ರಾಜಧಾನಿ ದಿಲ್ಲಿ ಪ್ರದೇಶದಲ್ಲಿ ನಡೆಯುವ ಚುನಾವಣೆಯು ರಾಷ್ಟ್ರೀಯ ಅಂತಿಮ ಚುನಾವಣೆಯ ಮುನ್ನ ಪರೀಕ್ಷಾ ಚುನಾವಣೆಯಾಗಲಿದೆ. ಅಂದರೆ ದೇಶ ರಾಜಕೀಯವಾಗಿ ಯಾವ ದಿಕ್ಕಿನತ್ತ ಸಾಗುತ್ತದೆ ಎಂಬ ಮುನ್ಸೂಚನೆಯ ಪರೀಕ್ಷಾ ಚುನಾವಣೆ ಎಂದೇ ಭಾವಿಸಲಾಗುವುದು. ದೇಶದಲ್ಲಿ ಬಲವಾದ ಮತ್ತು ಸುಸಂಘಟಿತವಾದ ನಿರ್ದಿಷ್ಟ ಸಿದ್ಧಾಂತ ಬದ್ಧವಾದ ಎರಡು ರಾಜಕೀಯ ಪಕ್ಷಗಳು ಇಲ್ಲದೇ ಇರುವುದರಿಂದ

ದೇಶದ ಮತದಾರರ ಮುಂದೆ ಆಯ್ಕೆಯ ದೊಡ್ಡ ಸವಾಲೇ ಇದೆ. ಇದುವರೆಗೆ ಹತ್ತು ವರ್ಷ ಆಡಳಿತ ನಡೆಸಿದ ವಿವಿಧ ಪಕ್ಷಗಳ ಒಕ್ಕೂಟ ಯು.ಪಿ.ಎ.ಗೆ ಮತ ಹಾಕಿದರೆ ದೇಶದ ಇಂದಿನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯಲ್ಲಿ ಬದಲಾವಣೆ ತರಲು ಸಾಧ್ಯವಾಗುವುದಿಲ್ಲ. ಬೇರೊಂದು ಸದೃಢ ಪಕ್ಷಕ್ಕೆ ಮತ ಹಾಕಬೇಕೆಂದರೆ ಅಂಥ ಪಕ್ಷ ಇನ್ನು ಯಾವುದೂ ರೂಪಿತಗೊಂಡಿಲ್ಲ. ಇರುವ ಕೆಲವು ಪ್ರಾದೇಶಿಕ ಪಕ್ಷಗಳು ತಮ್ಮ ಪ್ರದೇಶದ ಹಿತ ಚಿಂತನೆಯನ್ನು ಮಾತ್ರ ಮಾಡಬಲ್ಲವೇ ಹೊರತು ರಾಷ್ಟ್ರ ಮಟ್ಟದ ಏಳಿಗೆಯ ಚಿಂತನೆ ಮಾಡಲಾರವು.

ಪ್ರಾದೇಶಿಕ ಪಕ್ಷದಲ್ಲಿರುವ ನಾಯಕರ ಅನುಭವ ಸೀಮಿತ, ಜ್ಞಾನ ಸೀಮಿತ. ಆದ್ದರಿಂದ ದೇಶದಲ್ಲಿ ಒಂದು ರೀತಿಯಾಗಿ ರಾಜಕೀಯ ನಿರ್ವಾತ ಉಂಟಾಗಿದೆ. ಈ ನಿರ್ವಾತ ಪ್ರದೇಶವನ್ನು ಸವಾತ ಪ್ರದೇಶವನ್ನಾಗಿ ಮಾಡುವುದು ಹೇಗೆ ಎಂಬ ಪ್ರಶ್ನೆ ಮತದಾರರ ಮುಂದೆ ಇದೆ. ಜನತೆ ಸಾಮಾನ್ಯವಾಗಿ ಪದ್ಧತಿ ನಿಷ್ಠವಾಗಲಿ, ವಾದನಿಷ್ಠವಾಗಲಿ ಇರುವುದಿಲ್ಲ. ಅದು ಪ್ರಮುಖವಾಗಿ ಜೀವನನಿಷ್ಠೆಯುಳ್ಳದ್ದಾಗಿರುತ್ತದೆ. ಸರ್ಕಾರ ಯಾವುದೇ ಪದ್ಧತಿನಿಷ್ಠೆಯಾಗಿರಲಿ, ವಾದನಿಷ್ಠೆಯಾಗಿರಲಿ ತಮ್ಮ ದೈನಂದಿನ ಜೀವನ ವ್ಯಾಪಾರ ಯಾವ ತೊಂದರೆ ಇಲ್ಲದೆ ಮತ್ತು ಸರಾಗವಾಗಿ ನಡೆಯುತ್ತಿದ್ದರೆ ಸಾಕು, ಜನತೆ ಸರ್ಕಾರದ ರಚನೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಆದ್ದರಿಂದ ಸರ್ಕಾರಗಳು ಜನತೆಯ ಕೇವಲ ಭೌತಿಕ ಹಿತವನ್ನು ಅನುಲಕ್ಷಿಸಿ ಕೆಲಸಮಾಡುತ್ತವೆ. ಆದರೆ ಜೀವನ ಕೇವಲ ಭೌತಿಕ ಸುಖದ ಮೇಲಷ್ಟೇ ರಚಿತವಾಗಿಲ್ಲ. ಭೌತಿಕ ಸುಖದ ಎಲ್ಲೆ ಮೀರಿ ಆಚೆಗಿರುವ ಆಧ್ಯಾತ್ಮಿಕ ಸುಖದ ಮೇಲೆಯೂ ರಚಿತವಾಗಿದೆ. ಭೌತಿಕ ಮತ್ತು ಆಧ್ಯಾತ್ಮಿಕ ಸುಖಗಳ ಸಮ್ಮಿಶ್ರಣವೇ ಜೀವನ. ಆದರೆ ಇಂದು ದೇಶದಲ್ಲಿರುವ ರಾಜಕೀಯ ಪಕ್ಷಗಳೆಲ್ಲವೂ ಜನತೆಯ ಭೌತಿಕ ಸುಖದ ಮೇಲೆ ಮಾತ್ರ ಕಣ್ಣಿಟ್ಟು ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ತಯಾರಿಸುತ್ತವೆ.

ಜೀವನದ ಇನ್ನೊಂದು ಪ್ರಮುಖ ಪಾರ್ಶ್ವವಾದ ಆಧ್ಯಾತ್ಮಿಕ ಜೀವನದ ಮೌಲ್ಯಗಳ ಅಗತ್ಯವನ್ನು ಮರೆತೇಬಿಟ್ಟಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಡೆದ ಎಲ್ಲ ಚುನಾವಣೆಗಳಲ್ಲಿ ಗೆದ್ದುಬಂದ ಸರ್ಕಾರಗಳು ಅಭಿವೃದ್ಧಿ ಎಂಬ ಪಾಶ್ಚಿಮಾತ್ಯ ರೀತಿಯಲ್ಲಿ ದೇಶವನ್ನು ಭೌತಿಕವಾಗಿ ಕಟ್ಟಿದವೇ ಹೊರತು, ದೇಶದೊಳಗಿನ ಹಾಗೂ ದೇಶದ ಜೀವನಾಡಿಯಾದ ಜನತೆಯ ಆಧ್ಯಾತ್ಮಿಕ ಬೆಳವಣಿಗೆಯ ಕಡೆಗೆ ಗಮನಕೊಡಲೇ ಇಲ್ಲ. ಫಲಸ್ವರೂಪವಾಗಿ ದೇಶದ ಪರಿಸರ ಹಾಳಾಗಿದೆ, ನೈಸರ್ಗಿಕ ಸಂಪತ್ತಿನ ಲೂಟಿಯಾಗಿದೆ, ಹವಾಮಾನ ಬದಲಾವಣೆಯಾಗಿದೆ, ಜನಜೀವನದಲ್ಲಿ ಮಿಥ್ಯಾಚಾರ ಹೆಚ್ಚಾಗಿದೆ ಮತ್ತು ರಾಜಕಾರಣ ಹಾಗೂ ಆಡಳಿತದಲ್ಲಿ ಭ್ರಷ್ಟಾಚಾರ ಅಸಹನೀಯವಾಗಿ ಬೆಳೆದಿದೆ. ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಮುನ್ನಡೆಯಾಗುತ್ತಿದ್ದ ಕಾಲದಲ್ಲಿ ಮೊದಲನೇ ಮಹಾಯುದ್ಧ ನಡೆಯಿತು. ಆಗ ಒಬ್ಬ ಪ್ರಭಾವಿ ರಾಜಕಾರಣಿ ಈ ಮಹಾಯುದ್ಧ ಜಗತ್ತನ್ನು ಪ್ರಜಾಪ್ರಭುತ್ವಕ್ಕೆ ಸುರಕ್ಷಿತ ಸ್ಥಳವನ್ನಾಗಿ ಮಾಡಲು ನಡೆಸಲಾಗಿತ್ತೆಂದು ಹೇಳಿದ. ಆದರೆ ಈಗ ದೇಶದಲ್ಲಿಯ ರಾಜಕೀಯ ಅನಿಶ್ಚಿತತೆಯೇ ಪ್ರಜಾಪ್ರಭುತ್ವಕ್ಕೆ ಅತ್ಯಂತ ಅಸುರಕ್ಷಿತ ತಾಣವಾಗಿಸಿದೆ.

ಭಾರತ ದೇಶ ಜಗತ್ತಿನಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ ದೇಶವೆಂಬ ಹೆಗ್ಗಳಿಕೆ

ಪಡೆದಿದೆ. ಭಾರತದಲ್ಲಿ ಪ್ರಜಾಪ್ರಭುತ್ವ ಒಂದು ಯಶಸ್ವಿ ರಾಜಕೀಯ ವ್ಯವಸ್ಥೆಯೆಂದು ಸಿದ್ಧವಾದರೆ ಜಗತ್ತಿನಲ್ಲಿ ಇಂದೂ ಮಿಲಿಟರಿ ರಾಜ್ಯಾಡಳಿತ ಮತ್ತು ಸರ್ವಾಧಿಕಾರಿ ರಾಜ್ಯಾಡಳಿತ ಇರುವ ರಾಷ್ಟ್ರಗಳಲ್ಲಿಯೂ ಕೂಡ ಪ್ರಜಾಪ್ರಭುತ್ವದ ಆಡಳಿತದ ಪದ್ಧತಿ ಬರಲು ಸಾಧ್ಯವಿದೆ. ಅಂಥ ಪಕ್ವ ಮತ್ತು ಸೃಜನಶೀಲ, ವಿಕಾಸಶೀಲ ಪ್ರಜಾಪ್ರಭುತ್ವವನ್ನಾಗಿ ನಮ್ಮ ದೇಶವನ್ನು ಮಾಡಬೇಕಿದೆ. ಗಾಂಧೀಜಿಯವರು ಅಂಥ ಆದರ್ಶ ಭಾರತವನ್ನೇ ಬಯಸಿದ್ದರು ಹಾಗು ಭಾರತದ ಸ್ವಾತಂತ್ರ್ಯ ಇಂದಿಗೂ ಲೋಕಹಿತಕಂಟಕವಾಲಾರದೆಂದು ಹೇಳಿದರು. ಆದರೆ ದೇಶದ ಇಂದಿನ ಎಲ್ಲ ರಾಜಕೀಯ ಪಕ್ಷಗಳು ಅಂಥ ಆದರ್ಶಯುತ ಪ್ರಜಾಪ್ರಭುತ್ವ ತರಲು ಅಸಮರ್ಥವಾಗಿವೆ. ಪರಿಣಾವಾಗಿ ಪ್ರಜಾಪ್ರಭುತ್ವದ ಬದಲಾಗಿ ರಾಜಕೀಯ ಪಕ್ಷಗಳ ಪ್ರಭುತ್ವ ನಡೆಯುವಂತಾಗಿದೆ.

ಈ ಹಿನ್ನೆಲೆಯಲ್ಲಿ ಬರಲಿರುವ ಐದು ರಾಜ್ಯಗಳಲ್ಲಿಯ ಚುನಾವಣೆ ಮತ್ತು ೨೦೧೪ರಲ್ಲಿ ನಡೆಯಲಿರುವ ರಾಷ್ಟ್ರೀಯ ಚುನಾವಣೆಯನ್ನು ದೇಶ ನೈಜ ಪ್ರಜಾಪ್ರಭುತ್ವದತ್ತ ತಿರುಗುವಂತೆ ಮಾಡುವ ದೊಡ್ಡ ಹೊಣೆಗಾರಿಕೆ ದೇಶದ ಸಧ್ಯದ ಅಪಾರ ಸಂಖ್ಯೆಯ ಮತದಾರರ ಮೇಲೆ ಬಿದ್ದಿದೆ. ಈ ಚುನಾವಣೆಯನ್ನು ಹಗುರಾಗಿ ಭಾವಿಸಿ ಬಹುಮತದಿಂದ ಒಂದೇ ಪಕ್ಷದ ಸರ್ಕಾರ ಅಥವ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡದರೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಇನ್ನೂ ಹೆಚ್ಚು ಹದಗೆಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಮತದಾರರಾದ ನಾವು ಏನು ಮಾಡಬೇಕು ಎಂಬ ತೀವ್ರ ಆಲೋಚನೆ ಮಾಡಬೇಕಿದೆ. ಇದುವರೆಗೆ ಹತ್ತು ವರ್ಷ ರಾಜ್ಯಭಾರ ಮಾಡಿ ತಪ್ಪು ಕೈಗಾರಿಕಾ ನೀತಿ, ಆರ್ಥಿಕ ನೀತಿ, ಕೃಷಿ ನೀತಿ, ರಕ್ಷಣಾ ನೀತಿ, ಶಿಕ್ಷಣ ನೀತಿ ಮತ್ತು ಅಭಿವೃದ್ಧಿ ನೀತಿಗಳಿಂದಾಗಿ ದೇಶದ ಜನತೆಯನ್ನು ನಿರ್ವೀಯರನ್ನಾಗಿಯೂ, ಪರಾವಲಂಬಿಗಳನ್ನಾಗಿಯೂ, ಸ್ವಾಭಿಮಾನಹೀನರನ್ನಾಗಿಯೂ ಮಾಡಿದ ಸರ್ಕಾರವನ್ನೇ ಪುನರಾಯ್ಕೆ ಮಾಡಿದಲ್ಲಿ ಅದೇ ಕೆಟ್ಟ ಪರಂಪರೆ ಮುನ್ನಡೆಯುವುದು.

ಚುನಾವಣೆಯ ಗರ್ಭದಲ್ಲಿ ಬದಲಾವಣೆಯ ಬೀಜ ಅಡಗಿರುತ್ತದೆ. ಮೊದಲಿದ್ದ ಸ್ಥಿತಿಗಿಂತ ಭಿನ್ನವಾದ ಸ್ಥಿತಿ ಉಂಟಾಗದಿದ್ದರೆ ಚುನಾವಣೆಯ ಅಗತ್ಯವಿರಲಿಲ್ಲ. ಬದಲಾವಣೆ ತರಬೇಕೆಂಬ ಇಚ್ಛೆಯೇ ಚುನಾವಣೆಯ ಪ್ರಕ್ರಿಯೆಗೆ ಪ್ರೇರಕವಾಗಿರುವುದರಿಂದ ಬರಲಿರುವ ೨೦೧೪ರ ಚುನಾವಣೆಯಲ್ಲಿ ಬದಲಾವಣೆ ಆಗಬೇಕಾದುದು ಸಹಜ ಕ್ರಿಯೆಯೆಂದು ಹೇಳಬೇಕು. ಆದ ಬದಲಾವಣೆಯಿಂದ ಪರಿಸ್ಥಿತಿ ಉತ್ತಮವಾಗುತ್ತದೊ ಅಥವ ಕೆಟ್ಟದಾಗುತ್ತದೊ ಎಂದು ಹೇಳಲು ಬರುವುದಿಲ್ಲವಾದರೂ ಉತ್ತಮ ಬದಲಾವಣೆಗಾಗಿ ಆಶಿಸುವುದು ಮತ್ತು ಅದನ್ನು ತರಲು ಪ್ರಯತ್ನಿಸುವುದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಕರ್ತವ್ಯ. ಒಂದು ವೇಳೆ ಬದಲಾವಣೆ ಉತ್ತಮವಾಗದಿದ್ದರೆ ಮತ್ತೆ ಬರುವ ಚುನಾವಣೆಯಲ್ಲಿ ಸರಿಪಡಿಸಬಹುದಾಗಿದೆ. ಆದ್ದರಿಂದ ಬರಲಿರುವ ಚುನಾವಣೆಯನ್ನು ಬದಲಾವಣೆಗಾಗಿ ಉಪಯೋಗಿಸಿಕೊಳ್ಳಬೇಕಾದುದು ಅಗತ್ಯ.

ಐದು ಅಥವಾ ಹತ್ತು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಪಕ್ಷಗಳಿಗೆ

ಸಹಜವಾಗಿಯೇ ಅಧಿಕಾರದ ರುಚಿ ಹತ್ತಿರುತ್ತದೆ. ಪುನಃ ಐದು ವರ್ಷ ಅಧಿಕಾರ ದೊರೆತರೆ ಅಧಿಕಾರದ ರುಚಿ ಮತ್ತೇರಿಸುತ್ತದೆ. ಮತ್ತು ಅಧಿಕಾರದಲ್ಲಿರುವವರನ್ನು ಕೆಡಿಸುತ್ತದೆ. ನೀತಿಬಾಹಿರರನ್ನಾಗಿ ಮಾಡುತ್ತದೆ. ಸಂಸ್ಕೃತದಲ್ಲಿ ಒಂದು ಮಾತಿದೆ. "ರಾಜ್ಯಾಂತೆ ನರಕ ಪ್ರಾಪ್ತಿಃ" ಈ ಮಾತಿನ ಸತ್ಯತೆಯನ್ನು ಈಗ ನಾವು ಪ್ರತ್ಯಕ್ಷವಾಗಿ ಕಾಣುತ್ತಿದ್ದೇವೆ. ಬಿಹಾರ ರಾಜ್ಯದ ಇಬ್ಬರು ಮಾಜಿ ಮುಖ್ಯಮಂತ್ರಿಗಳು ಕಾರಾಗೃಹದಲ್ಲಿ ಕಾಲ ನೂಕುತ್ತಿದ್ದಾರೆ. ಇನ್ನೂ ಕೆಲವು ರಾಜ್ಯದ ಮಂತ್ರಿಗಳು ಕಾರಾಗೃಹಕ್ಕೆ ಹೋಗಲಿದ್ದಾರೆ. ಇಸ್ಲಾಂ ದೇಶಗಳಲ್ಲಿ ಪ್ರಧಾನಮಂತ್ರಿಯಾಗಿ ರಾಜ್ಯಭಾರ ಮಾಡಿದವರು ಗಲ್ಲು ಶಿಕ್ಷೆಗೆ ಗುರಿಯಾಗಿದ್ದಾರೆ.

ಭಾರತದಲ್ಲಿ ರಾಜಕೀಯ ವಿಚಾರವಾಗಿ ಗಾಂಧೀಜಿ ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಅವರ ಪ್ರಕಾರ ರಾಜಕಾರಣ ಒಂದು ರೀತಿಯ ಸೇವೆಯೇ ಹೊರತು ಅಧಿಕಾರಕ್ಕಾಗಿ ಹೋರಾಟದ ದಾರಿಯಲ್ಲ. ಅಲ್ಲದೆ ಅವರು ರಾಜಕಾರಣವನ್ನು ಆಧ್ಯಾತ್ಮಿಕಕರಣಗೊಳಿಸಲು ಬಯಸಿದ್ದರು ಮತ್ತು ಆ ರೀತಿ ಮಾಡಲು ಪ್ರಯತ್ನಿಸಿದರು. ಅಂಥ ರಾಜಕಾರಣದ ಹೊಸ ಅಧ್ಯಾಯ ಬರಲಿರುವ ಚುನಾವಣೆಯಿಂದ ಆರಂಭವಾಗಬೇಕಿದೆ. ೨೧ನೇ ಶತಮಾನ ವಿಜ್ಞಾನ ಮತ್ತು ತಂತ್ರಜ್ಞಾನದ ಯುಗವಾಗಿ ಪರಿಣಮಿಸಲಿದೆ. ೨೦ನೇ ಶತಮಾನದವರೆಗಿದ್ದ ಹಳೆಯ ಭಕ್ತಿ, ಶ್ರದ್ಧೆ, ರೀತಿ-ನೀತಿ, ರಾಜಕೀಯ ಸಿದ್ಧಾಂತಗಳು, ಸರ್ಕಾರದ ಸ್ವರೂಪ ಎಲ್ಲ ಅಳಿಸಿ ಹೋಗಲಿವೆ. ಆಗ ಡಿ.ವಿ.ಜಿ. ಹೇಳುವಂತೆ ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ ಲೋಕ ತಳಮಳಿಸುತ್ತದೆ. ಪ್ರಾಕೃತಿಕ ಏರುಪೇರುಗಳೊಂದಿಗೆ ಸಾಮಾಜಿಕ ಏರುಪೇರುಗಳಾಗುತ್ತವೆ. ಮನುಷ್ಯ ಮತ್ತು ಅವನಿಂದ ರಚಿತವಾಗುವ ಸರ್ಕಾರ ಎಲ್ಲವೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಯಂತ್ರ ಮತ್ತು ದೈತ್ಯಶಕ್ತಿಯ ಶಸ್ತ್ರಾಸ್ತ್ರಗಳಿಂದ ಪ್ರಭಾವಿತವಾಗಲಿವೆ. ಅವುಗಳ ದಾಸನಾಗಲಿವೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಮಾತಿನ ಬದಲಾಗಿ ವಿಜ್ಞಾನ, ತಂತ್ರಜ್ಞಾನ, ಯಂತ್ರಗಳ ಮತ್ತು ಶಸ್ತಾಸ್ತಗಳ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಸ್ಥಿತಿ ಉಂಟಾಗಲಿದೆ. ಈ ಹಿನ್ನೆಲೆಯಲ್ಲಿ ೨೦೧೪ರ ಮಹಾ ಚುನಾವಣೆ ಬಹಳ ಐತಿಹಾಸಿಕ. ಭಾರತ ದೇಶದ ಪ್ರಜೆಗಳಾದ ನಾವು ಒಂದು ವಿಭಿನ್ನ ರೀತಿಯ ಪ್ರಜಾಸತ್ತಾತ್ಮಕ ದೇಶವನ್ನಾಗಿ ಮಾಡಲು ಬಯಸುವುದಾದರೆ ಅದಕ್ಕೆ ತಕ್ಕ ಚಿಂತನೆಯನ್ನು ನಾವು ಮತದಾರರು ಮಾಡಬೇಕು. ಮೊಟ್ಟ ಮೊದಲು ದೇಶದ ನಿರ್ಮಾಣಕ್ಕೆ ಸಾಮಾನ್ಯವಾದ ಒಂದು ನೀಲ ನಕಾಶೆಯನ್ನು ತಯಾರಿಸಬೇಕು. ಇದುವರೆಗೆ ಆಗಿಹೋದ ೧೨ ಪಂಚವಾರ್ಷಿಕ ಯೋಜನೆಗಳ ಅನುಷ್ಠಾನ ಯಾವ ನೀಲನಕ್ಷೆಯೂ ಇಲ್ಲದೆ ಆದವು. ಒಂದು ಸಾಮಾನ್ಯ ಮನೆ ಕಟ್ಟುವ ಮುನ್ನ ನೀಲನಕ್ಷೆಯನ್ನು ತಯಾರಿಸುವ ನಾವು ಭಾರತದಂಥ ದೊಡ್ಡ ದೇಶವನ್ನು ಕಟ್ಟುವುದಕ್ಕಾಗಿ ನೀಲನಕ್ಷೆಯನ್ನು ತಯಾರಿಸದೆ ಇದ್ದದ್ದು ದೊಡ್ಡ ತಪ್ಪೆಂದು ಅನಿಸುತ್ತದೆ. ಆದ್ದರಿಂದ ಈಗಲಾದರೂ ಕೇಂದ್ರದಲ್ಲಿ ಹೊಸ ಸರ್ಕಾರವನ್ನು ಸ್ಥಾಪಿಸುವ ಮೊದಲು ನೀಲ ನಕ್ಷೆಯನ್ನು ತಯಾರಿಸಬೇಕು. ಅಂಥ ನೀಲನಕ್ಷೆಯಲ್ಲಿ ಇರಬೇಕಾದ ಕೆಲ ಅಂಶಗಳು ಈ ರೀತಿ ಇರಬೇಕು:-

೧. ಭಾರತವನ್ನು ಪುನಃ ಗ್ರಾಮಪ್ರಾಧಾನ್ಯ ದೇಶವನ್ನಾಗಿ ಮಾಡಬೇಕು; ಗ್ರಾಮವೆಂಬ ಸೂರ್ಯನ ಸುತ್ತ ನಗರವೆಂಬ ಗ್ರಹಗಳು ಸುತ್ತಬೇಕು.

೨. ನೆರೆಯ ದೇಶಗಳೊಂದಿಗೆ ಸಹೋದರತ್ವದ ಸಂಬಂಧ ಬೆಳಿಸಿಕೊಂಡು ಆ ಎರಡು ದೇಶಗಳಲ್ಲೂ ನಿಃಶಸ್ತ್ರೀಕರಣಗೊಳ್ಳುವಂತೆ ಮಾಡಬೇಕು;

೩. ಗ್ರಾಮ ಸ್ವಾವಲಂಬನೆ, ಜಿಲ್ಲಾ ಸ್ವಾವಲಂಬನೆ, ರಾಜ್ಯ ಸ್ವಾವಲಂಬನೆ ಮತ್ತು ದೇಶ ಸ್ವಾವಲಂಬನೆ ಹೀಗೆ ಸಾಗರದ ಅಲೆಯಂತೆ ಸ್ವಾವಲಂಬನೆಯ ವರ್ತುಲ ವಿಸ್ತಾರಗೊಳ್ಳುತ್ತಾ ಹೋಗಬೇಕು.

೪. ಬ್ರಹ್ಮ ಸತ್ಯಂ, ಜಗತ್ ಸ್ಫೂರ್ತಿಃ, ಜೀವನಂ ಸತ್ಯ ಶೋಧನಂ ಎಂಬ ರೀತಿಯಲ್ಲಿ ಸಮಾಜದ ನಿರ್ಮಾಣವಾಗಬೇಕು. ಅದಕ್ಕನುಗುಣವಾದ ಜೀವನಶಿಕ್ಷಣ ದೇಶದ ಮಕ್ಕಳಿಗೆ ದೊರೆಯಬೇಕು;

೫. ಬೇರೆ ದೇಶಗಳ ಅಂಧಾನುಕರಣೆ ಮಾಡುವುದನ್ನು ಭಾರತ ಬಿಡಬೇಕು. ಹಾಗೆ ಮಾಡದೆ ಇದ್ದರೆ ಭಾರತ ತನ್ನ ಸ್ವಂತ ತಿಳುವಳಿಕೆಯನ್ನು ಬೇರೆ ದೇಶಗಳ ಕೈಗೆ ಕೊಟ್ಟು ಅವರಾಡಿಸುವ ಹಾಗೆ ಕುಣಿಯುವ ಕೋತಿಯಂತೆ ಆಗುತ್ತದೆ. ಆದ್ದರಿಂದ ಅತಿಯಾದ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಂತರಿಕ್ಷಯಾನಗಳಂಥ ಹುಚ್ಚು ಸಾಹಸ ಬಿಟ್ಟು ತನ್ನ ಭೂಮಿಯ ಮೇಲಿರುವ ಸಮಸ್ಯೆಗಳನ್ನು ಬಗೆಹರಿಸುವುದರ ಕಡೆಗೆ ಗಮನ ಕೊಡಬೇಕು. ಮನುಷ್ಯಾದಿಯಾಗಿ ಎಲ್ಲ ಜೀವಿಗಳ ಜೀವನ ನೆಮ್ಮದಿಯಾಗಿರುವಂತೆ ಮಾಡಬೇಕು;

೬. ರಾಜನೀತಿ, ಅರ್ಥನೀತಿ, ಕೈಗಾರಿಕಾನೀತಿ ಮುಂತಾದವುಗಳೆಲ್ಲಾ ವಿಕೇಂದ್ರೀಕರಣವನ್ನೇ ಪ್ರೋತ್ಸಾಹಿಸುವಂತೆ ಇರಬೇಕು;

೭. ಖಾದಿ ಮತ್ತು ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು ಮತ್ತು ಬಹುರಾಷ್ಟ್ರೀಯ ವಾಣಿಜ್ಯ ಕಂಪನಿಗಳಿಂದ ಇವುಗಳಿಗೆ ರಕ್ಷಣೆ ಕೊಡಬೇಕು;

೮. ಕೃಷಿಗೆ ಹೆಚ್ಚು ಮಹತ್ವ ಕೊಡಬೇಕು. ಅರಣ್ಯ ಮತ್ತು ಕೃಷಿ ಭೂಮಿ ಯಾವುದೇ ಕಾರಣಕ್ಕೂ ಕಡಿಮೆಯಾಗದಂತೆ ಮುಂಜಾಗ್ರತೆ ವಹಿಸಬೇಕು;

೯. ಇಪ್ಪತ್ತೊಂದನೇ ಶತಮಾನದ ಭಾರತವನ್ನು ಯಾವ ಸೈದ್ಧಾಂತಿಕ ಚೌಕಟ್ಟಿನಲ್ಲಿ ನಿರ್ಮಿಸಬೇಕೆಂಬುದನ್ನು ಆಲೋಚಿಸಬೇಕು. ಆ ಸೈದ್ಧಾಂತಿಕ ಚೌಕಟ್ಟು ಸಾಮ್ಯವಾದವೇ, ಸಮಾಜವಾದವೇ, ಪ್ರಭುತ್ವ ಸಮಾಜವಾದವೇ, ಬಂಡವಾಳಶಾಹಿವಾದವೇ, ಸರ್ವೋದಯ ಸಮಾಜ ಎಂಬುದು ಇತ್ಯರ್ಥವಾಗಬೇಕು. ಈ ಎಲ್ಲ ಬಗೆಯ ರಾಜಕೀಯ ಚಿಂತನೆಗಳನ್ನು ಪರಸ್ಪರ ಹೋಲಿಸಿ ಯಾವುದು ಉತ್ತಮ ಸಿದ್ಧಾಂತ ಎಂಬುದನ್ನು ನಿಷ್ಕರ್ಷಿಸಬೇಕು. ಈ ವಿಷಯದಲ್ಲಿ ಭಾರತೀಯ ಮತದಾರರು ಅಜ್ಞಾನಿಗಳಾಗಿಯೇ ಇದ್ದಾರೆ ಎಂದು ಹೇಳಬಹುದು. ಅವರಿಗೆ ಈ ಯಾವ ಸಿದ್ಧಾಂತದ ವಾಸ್ತವಿಕ ಪರಿಣಾಮ ಗೊತ್ತಿಲ್ಲ. ರಾಜಕೀಯ ಪಕ್ಷಗಳ ಚುನಾವಣಾ ಸಮಯದ ಆಮಿಷಗಳಾಧಾರಿತ ಪ್ರನಾಳಿಕೆಯಿಂದ ಮಾತ್ರ ಪ್ರಭಾವಿತರಾಗುತ್ತಾರೆಯೇ ಹೊರತು ಆ ಸಿದ್ಧಾಂತಗಳ ಆಚರಣೆಯ ಫಲಸ್ವರೂಪವಾಗಿ ಯಾವ ಪ್ರಕಾರದ ಸಮಾಜ ಅಂತಿಮವಾಗಿ ನಿರ್ಮಾಣವಾಗುತ್ತದೆ ಎಂಬುದರ ಬಗ್ಗೆ ಆಲೋಚಿಸಿರುವುದಿಲ್ಲ.

ಆಮಿಷಗಳ ಸ್ಪರ್ಧಾತ್ಮಕ ರಾಜಕೀಯ ಪ್ರಣಾಳಿಕೆಗಳಿಂದ ದೇಶದ ಹಿತ

ಎಂದೂ ಸಾಧಿತವಾಗುವುದಿಲ್ಲ. ಆದ್ದರಿಂದ ಈ ಹಲವಾರು ಬಗೆಯ ರಾಜಕೀಯ ಸಿದ್ಧಾಂತಗಳ ಅಧ್ಯಯನ ಅಗತ್ಯವಾಗಿರುತ್ತದೆ.

ಮೇಲ್ಕಾಣಿಸಿದ ರಾಷ್ಟ್ರ ನಿರ್ಮಾಣದ ನೀಲನಕ್ಷೆಯಲ್ಲಿ ಇರಬೇಕಾದ ಅಂಶಗಳು ಅಂತಿಮವಾದುದಲ್ಲ. ಗಾಂಧೀಜಿಯವರ 'ನನ್ನ ಕನಸಿನ ಭಾರತ' ಎಂಬ ಲೇಖನಾಧಾರಿತವಾಗಿ ಅನೇಕ ಅಂಶಗಳನ್ನು ಈ ಪಟ್ಟಿಗೆ ಸೇರಿಸಬಹುದು.

ಚುನಾವಣಾಯುಗ ಪ್ರಾರಂಭವಾಗುವ ಕಾಲದಲ್ಲಿ ಮತದಾರರಾದ ನಾವೇನು ಮಾಡಬೇಕು ಎಂಬ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು. ಚಿಂತನೆಗಾಗಿ ಈ ಕೆಳಗೆ ಕೆಲವು ಸಲಹೆಗಳನ್ನು ಸೂಚಿಸಲಾಗಿದೆ. ಅವುಗಳನ್ನು ಪರಿಷ್ಕರಿಸುತ್ತಾ ಅವು ಹೇಗೆ ವ್ಯವಹಾರ ಯೋಗ್ಯವಾಗಬಹುದು ಎಂಬುದರ ಬಗ್ಗೆ ಆಲೋಚಿಸಬೇಕು.

೧. ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿ ಪಕ್ಷಾತೀತ ಮತದಾರರ ವೇದಿಕೆಯನ್ನು ರಚಿಸಬೇಕು. ವೇದಿಕೆಯಲ್ಲಿ ಸ್ಪರ್ಧಿಸಲಿರುವ ಉಮೇದುವಾರರ ಜೀವನ ಸಾಧನೆಗಳ ಬಗ್ಗೆ, ವಿದ್ಯಾರ್ಹತೆ ಬಗ್ಗೆ ಇರಬಹುದಾದ ಇನ್ನಿತರ ಸಾಮರ್ಥ್ಯಗಳ ಬಗ್ಗೆ ಚರ್ಚಿಸಿ ಸಾಮಾನ್ಯವಾಗಿ ಎಲ್ಲರೂ ಒಪ್ಪಬಹುದಾದ ಅಬ್ಯರ್ಥಿಯನ್ನು ಗುರುತಿಸ ಬೇಕು.

೨. ವೇದಿಕೆಯ ಆಶ್ರಯದಲ್ಲಿ ಸಾರ್ವಜನಿಕ ಸಭೆ ಏರ್ಪಡಿಸಿ ಪ್ರತಿಯೋರ್ವ ಅಭ್ಯರ್ಥಿಯಿಂದ ಅವನ ರಾಜಕೀಯ ಅಜೆಂಡಾದ ಬಗ್ಗೆ ಭಾಷಣ ಮಾಡಿಸಬೇಕು ಮತ್ತು ಸಾಧ್ಯವಾದರೆ ಪ್ರಶ್ನೋತ್ತರ ನಡೆಸಬೇಕು. ಇದೆಲ್ಲವೂ ಶಾಂತಿ ರೀತಿಯಲ್ಲಿ ಮತ್ತು ನಾಗರೀಕವಾಗಿ ನಡೆಯಬೇಕು.

೩. ಅರವಿಂದ್ ಕೇಜ್ರೀವಾಲ್ ದಿಲ್ಲಿ ಕ್ಷೇತ್ರಕ್ಕೆ ಸೀಮಿತವಾಗಿ 'ಆಮ್-ಆದ್ಮಿ'ಯಂಥ ಸಂಘಟನೆಯನ್ನು ಸ್ಥಾಪಿಸಿ ತನ್ನದೇ ಆದ ಉಮೇದುವಾರರನ್ನು ಕಣಕ್ಕಿಳಿಸಿರುವಂತೆ ಬೇರೆಲ್ಲಾ ಕಡೆ ಮಾಡಬೇಕು.

೪. ಯಾವುದೇ ಪ್ರಕಾರದ ಆಮಿಷಗಳಿಗೆ ಸೋಲದಂತೆ ವ್ಯಾಪಕ ಪ್ರಚಾರಮಾಡಿ ಮತದಾರರಿಗೆ ತಿಳುವಳಿಕೆ ಕೊಡಬೇಕು.

೫. ಯಾವುದೇ ಪ್ರಾದೇಶಿಕ ಪಕ್ಷಕ್ಕೆ ಮತ ಚಲಾಯಿಸದೆ ಯಾವುದಾದರೊಂದು ರಾಷ್ಟ್ರೀಯ ಪಕ್ಷದ ಪರವಾಗಿ ಮತಚಲಾಯಿಸಬೇಕೆಂದು ಪ್ರಚಾರ ಮಾಡಬೇಕು.

೬. ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಎಂಬ ಹೆಸರಿನಲ್ಲಿ ಸಮಾಜವನ್ನು ಒಡೆದು ರಾಜಕೀಯ ಕಾರಣಕ್ಕಾಗಿ ಓಲೈಸುವ ನೀತಿ ಇಟ್ಟುಕೊಂಡಿರುವ ರಾಜಕೀಯ ಪಕ್ಷಕ್ಕೆ ಮತಹಾಕಬಾರದು.

೭. ಅಂತರಿಕ ಪ್ರಜಾಪ್ರಭುತ್ವವಿಲ್ಲದ ರಾಜಕೀಯ ಪಕ್ಷಕ್ಕೆ ಮತಹಾಕಬಾರದು.

೮. ಹಿಂಸೆಯಲ್ಲಿ ನಂಬಿಕೆಯಿಟ್ಟಿರುವ ಯಾವುದೇ ಪಕ್ಷ ಅಥವಾ ವ್ಯಕ್ತಿಗೆ ಮತಹಾಕಬಾರದು.

ಎಲ್ಲ ವಿಧವಾದ ರಾಜಕೀಯ ಪದ್ಧತಿಗಳಲ್ಲಿ ಪ್ರಜಾಪ್ರಭುತ್ವ ರಾಜಕೀಯ ಪದ್ಧತಿ ಉತ್ತಮಾದುದು. ಅದರಲ್ಲಿ ಲೋಪದೋಷಗಳಿದ್ದರೂ ಕೂಡ ಅವುಗಳನ್ನು ನಿವಾರಣೆ ಮಾಡಬೇಕು. ಜನರು ಸ್ವಾಭಾವಿಕವಾಗಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳಲ್ಲಿ ಅಸಮಾನರಾಗಿರುವುದರಿಂದ ಪ್ರಜಾಪ್ರಭುತ್ವ ಇನ್ನೂ ಹೆಚ್ಚು

ಅಗತ್ಯವಾಗುತ್ತದೆ. ಪ್ರತಿಯೊಬ್ಬ ಮನುಷ್ಯನಿಗೆ ಇನ್ನೊಬ್ಬನಷ್ಟೇ ವಿಕಾಸಹೊಂದುವ ಅವಕಾಶವಿರಬೇಕು. ಪ್ರತಿಯೊಬ್ಬ ಮನುಷ್ಯನಿಂದ ಅತ್ಯುತ್ತಮವಾದುದನ್ನು ಪಡೆಯಲು ಸಮಾಜ ಬಯಸುತ್ತದೆ. ರಾಜಕೀಯ ತತ್ವಜ್ಞಾನಿ ಅಮೇರಿಕಾದ ಜಾನ್ ಡೀವಿಯವರ ಪ್ರಕಾರ ಪ್ರಜಾಪ್ರಭುತ್ವ ಮಾನವನ ಮನಸ್ಸನ್ನು ಸ್ವತಂತ್ರಗೊಳಿಸುತ್ತದೆ. ಹೊಸ ಹೊಸ ಪ್ರಯೋಗಗಳನ್ನು ಮಾಡಲು ಪ್ರೋತ್ಸಾಹಿಸುತ್ತದೆ. ಇಂಥ ಪ್ರಯೋಗಗಳಿಂದಾಗಿಯೇ ಮನುಷ್ಯರು ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೊಳ್ಳುವಂತೆ ಮಾಡುತ್ತದೆ. ಆದ್ದರಿಂದ ಪ್ರಜಾಪ್ರಭುತ್ವ ಎಂಬುದು ಕೇವಲ ರಾಜಕೀಯ ಸಿದ್ಧಾಂತವಲ್ಲ. ಸರ್ಕಾರ ರಚನೆಯ ವಿಧಿಯಲ್ಲ. ಅಥವಾ ಒಂದು ಸಮಾಜ ವ್ಯವಸ್ಥೆಯಲ್ಲ. ಸ್ವಯಂಪ್ರೇರಿತ ಸ್ವತಂತ್ರ ಬುದ್ಧಿಮತ್ತೆ ಮತ್ತು ಚಟುವಟಿಕೆ ಸಮನ್ವಯಗೊಳ್ಳುವಂಥ ಒಂದು ಜೀವನಪದ್ಧತಿ. ಅಲ್ಲಿ ಯಾವುದೇ ಪ್ರಕಾರದ ಬಲಾತ್ಕಾರವಿರುವುದಿಲ್ಲ. ಇಂಥ ಜೀವನ ಪದ್ಧತಿಯೇ ಇಡೀ ಮಾನವ ಕುಲಕ್ಕೆ ಉತ್ತಮವಾದುದು, ಇದು ಮನುಷ್ಯನ ಗುಣಧರ್ಮ ಮತ್ತು ವಿಶ್ವದ ಗುಣಧರ್ಮಕ್ಕೆ ಅನುಸಾರವಾಗಿ ಇರುವಂಥದ್ದು. ಇಂಥ ಸಮಾಜದ ಸ್ವರೂಪವನ್ನೇ ಗಾಂಧೀಜಿಯವರು ಸರ್ವೋದಯ ಸಮಾಜವೆಂದು ಕರೆದಿದ್ದರು.

ಸರ್ವೋದಯ ಸಮಾಜದಲ್ಲಿ ಅತ್ಯಂತ ಹಿಂದುಳಿದ ಮತ್ತು ದುರ್ಬಲ ವ್ಯಕ್ತಿಯ ಏಳಿಗೆಯಾಗುವ ಸಂಭವವಿರುತ್ತದೆ. ಇರುವೆಯಿಂದ ಆನೆಯವರೆಗೆ, ಜಿಂಕೆಯಿಂದ ಹುಲಿಯವರೆಗೆ ಎಲ್ಲ ಪ್ರಾಣಿಗಳಿಗೂ ಜೀವನಗೌರವವಿರುತ್ತದೆ. ಬಹುಜನ ಸುಖಾಯ, ಬಹುಜನ ಹಿತಾಯ ಎಂಬ ವಿಚಾರಕ್ಕಿಂತ ಸರ್ವೋದಯ ವಿಚಾರ ಸರ್ವಕಾಲಕ್ಕೂ, ಸರ್ವಸ್ಥಾನಕ್ಕೂ ಅನ್ವಯಿಸುವಂಥದ್ದು. ಸರ್ವೋದಯ ಸಮಾಜವನ್ನು ರಚಿಸಲು ಪೂರಕವಾಗುವಂಥ ರಾಜಕೀಯ ಪಕ್ಷಗಳಿಗೆ ಮತ್ತು ವ್ಯಕ್ತಿಗಳಿಗೆ ಮತ ಕೊಡುವಂಥ ಸದ್ಬುದ್ಧಿ ಎಲ್ಲರಿಗೂ ಬರಲೆಂದು ಬರಲಿರುವ ಚುನಾವಣಾಯುಗದ ಸಂದರ್ಭದಲ್ಲಿ ಮಾಡಬೇಕಾದ ಪ್ರಾರ್ಥನೆ.

* * *

ಸರ್ವೋದಯದ ಅಭಿಪ್ರಾಯ

- ವಿನೋಬಾ

ಚಿಕ್ಕ ಹಳ್ಳಿಗೆ ನಗರದ ರೂಪ ಕೊಡುವುದು ಮತ್ತು ನಗರಕ್ಕೆ ಗ್ರಾಮೀಣ ರೂಪ ಕೊಡುವುದು ಸರ್ವೋದಯದ ಆದರ್ಶ. ಬ್ರಾಹ್ಮಣನಿಗೆ ಕೂಲಿಯವನಾಗೆಂದೂ ಮತ್ತು ದಲಿತ ಕೂಲಿಯವನಿಗೆ ನೀನು ವಿದ್ಯಾಭ್ಯಾಸ ಮಾಡೆಂದೂ ಹೇಳುತ್ತೇವೆ. ಪುರುಷರಿಗೆ ನೀವು ನಮ್ರರಾಗಿ, ವಿನಯಶೀಲರಾಗಿ ಅಡಿಗೆ ಮಾಡುವುದನ್ನು ಕಲಿತುಕೊಳ್ಳಿ. ಮಕ್ಕಳನ್ನು ನೋಡಿಕೊಳ್ಳಿ ಎಂದು ಹೇಳುತ್ತೇವೆ. ಹೆಣ್ಣುಮಕ್ಕಳಿಗೆ ನೀವು ಸಾಮಾಜಿಕ ಕಾರ್ಯದ ಜವಾಬ್ದಾರಿ ಎತ್ತಿಕೊಳ್ಳಿ ಎಂದು ಹೇಳುತ್ತೇವೆ. ಯಾರ ಬಳಿ ಯಾವ ಗುಣವಿಲ್ಲವೋ ಆ ನ್ಯೂನ್ಯತೆಯನ್ನು ತುಂಬುವುದು ಸರ್ವೋದಯ. ಈ ಪ್ರಕಾರ ಗುಣಗಳ ಪೂರ್ತಿಯಾಗುವುದು. ಪ್ರತಿಯೊಬ್ಬ ಪೂರ್ಣತೆಯ ಕಡೆಗೆ ಹೋಗುವನು.

ಸರ್ವೋದಯವೆಂದರೆ ಎಲ್ಲರ ಒಳಿತು. ಎಲ್ಲರ ಬಗ್ಗೆ ಸಮಾನ ಚಿಂತನೆ ಮತ್ತು ಎಲ್ಲರ ಮೇಲೆ ಸಮಾನ ಪ್ರೀತಿ! ಯಾವ ರೀತಿ ತಾಯಿ ತನ್ನ ಎಲ್ಲ ಮಕ್ಕಳ ಮೇಲೆ ಸಮಾನ ಪ್ರೀತಿ ಇಟ್ಟಿರುತ್ತಾಳೋ ಅದೇ ರೀತಿ ಸಮಾನ ಪ್ರೀತಿಯಿಂದ ತಿಳಿದು ಮತ್ತು ತಿಳಿಸಿ ಸಮಾಜ ರಚನೆ ಮಾಡಲಿ. ಇಂತಹ ಸಮಾಜ ರಚನೆ ಮಾಡುವುದಕ್ಕೆ ಕುಳಿತರೆ ಕೆಲಸಮಾಡುವ ಉತ್ಸಾಹ ಕಡಿಮೆಯಾಗದು. "ಹೆಚ್ಚು ಪುರುಷಾರ್ಥ ಮಾಡಿದಾಗ ಹೆಚ್ಚು ಸಂಪತ್ತು ದೊರೆಯುವ ಆಸೆ ಇದ್ದಾಗ ಜನರು ಹೆಚ್ಚು ಪರಿಶ್ರಮ ಮಾಡುತ್ತಾರೆ" ಎಂದು ಕೆಲವರು ಹೇಳುತ್ತಾರೆ. ಆದರೆ ನಿಜ ಸಂಗತಿ ಹಾಗಲ್ಲ. ಮನೆಯಲ್ಲಿ ತಂದೆ ಹೆಚ್ಚು ಕೆಲಸಮಾಡುತ್ತಲೇ ಇರುತ್ತಾರೆ. ಹೆಚ್ಚು ರೊಟ್ಟಿ ಸಿಕ್ಕಾಗ ಮಾತ್ರ ಹೆಚ್ಚು ಕೆಲಸ ಮಾಡುತ್ತಾರೇನು? ಮನೆಯಲ್ಲಿ ಎಲ್ಲ ಜನರು ಪ್ರೇಮಪೂರ್ವಕವಾಗಿ ಎಲ್ಲರದೂ ಸಮಾನ ಹಕ್ಕು ಇದೆಯೆಂದು ತಿಳಿಯುತ್ತಾರೆ. ಯಾರು ಎಷ್ಟು ಸಂಪಾದಿಸುವರೋ ಅಷ್ಟೇ ಅವನು ಊಟ ಮಡುವನೆಂಬ ನಿಯಮ ಕುಟುಂಬದಲ್ಲಿ ಇರುವುದಿಲ್ಲ. ಹೆಚ್ಚಾಗಲೀ ಕಡಿಮೆಯಾಗಲೀ ಗಳಿಸಿದ ನಂತರ ಅದರ ಮೇಲೆ ಎಲ್ಲರದೂ ಸಮಾನ ಹಕ್ಕು ಇರುತ್ತದೆ. ಹೀಗೆ ಇದ್ದ ಮೇಲೂ ಕೆಲಸಮಾಡುವುದಕ್ಕೆ ಉತ್ಸಾಹವಿದ್ದೇ ಇರುತ್ತದೆ.

ಕುಟುಂಬದ ಮಾತು ಬೇರೆ. "ಸಮಾಜದಲ್ಲಿ ಹೆಚ್ಚು ಸಂಪಾದಿಸಿದರೆ ಹೆಚ್ಚು ಭೋಗ ಮಾಡುವೆ ಎಂದಿದ್ದರೆ ಮಾತ್ರ ಪುರುಷಾರ್ಥ ಹೆಚ್ಚಾಗುವುದು" ಎಂದು ಕೆಲವರು ಹೇಳುತ್ತಾರೆ. ಆದರೆ ಈ ವಿಚಾರ ಅತ್ಯಂತ ಅಧಾರ್ಮಿಕ ವಿಚಾರವೆಂದು ನಾನು ತಿಳಿಯುತ್ತೇನೆ. ಸಮಾಜದಲ್ಲಿ ಇದೇ ನಡೆಯುತ್ತದೆ ಎಂಬುದೇನೋ ನಿಜ. ಆದರೆ ಸಮಾಜದಲ್ಲಿ ಅನೇಕ ಕೆಟ್ಟ ಸಂಗತಿಗಳು ನಡೆಯುತ್ತವೆ. ಇಂಥ ತಪ್ಪು ಮತ್ತು ಅಧಾರ್ಮಿಕ ವಿಚಾರದಿಂದ ಕೆಲಸಮಾಡುವುದಕ್ಕೆ ಪ್ರೇರಣೆ ಸಿಗುವ ಬದಲು ಸಂಗ್ರಹ ಮಾಡುವ ಪ್ರೇರಣೆ ಹೆಚ್ಚುತ್ತದೆ. ಅದರ ಪರಿಣಾಮ ಸ್ವರೂಪವಾಗಿ ಆಲಸ್ಯ ಹುಟ್ಟುತ್ತದೆ. ಕರ್ಮ ಪ್ರೇರಣೆ ಕ್ಷೀಣವಾಗುತ್ತದೆ. ಆದ್ದರಿಂದ ಎಲ್ಲರೂ ಸಮಾನವಾಗಿ ಭೋಗಿಸುವುದರಿಂದ

ಕರ್ಮ ಪ್ರೇರಣೆ ಕಡಿಮೆಯಾಗುತ್ತದೆ ಎಂಬುದು ಒಂದು ತಪ್ಪು ಭಾವನೆ.

ಜಗತ್ತಿನಲ್ಲಿ ಇಂಥ ಅನೇಕ ತಿಳುವಳಿಕೆಗಳು ಇವೆ. ಆಟಂ-ಹೈಡ್ರೋಜನ್‌ನಂಥ ಬಾಂಬ್‌ಗಳನ್ನು ಮಾಡಿದರೆ ಯುದ್ಧ ತಪ್ಪುವುದು ಮತ್ತು ಶಾಂತಿಯಾಗುವುದು ಎಂದು ದೊಡ್ಡ ದೊಡ್ಡ ದೇಶಗಳಿಗೆ ಭ್ರಮೆಯಿದೆ. ಬಹಳಷ್ಟು ಔಷಧಿ ಕುಡಿಯುತ್ತ ಹೋದರೆ ಕಾಯಿಲೆ ಕಡಿಮೆಯಾಗುವುದೆಂಬ ಎರಡನೇ ಭ್ರಮೆ ಇದೆ. ಎಷ್ಟೊಂದು ಡಾಕ್ಟರ್‌ಗಳು ಹೆಚ್ಚುತ್ತಾ ಹೋಗುವರೋ ಅಷ್ಟೇ ಪ್ರಮಾಣದಲ್ಲಿ ರೋಗ ಮತ್ತು ಔಷಧಿಗಳು ಕೂಡ ಹೆಚ್ಚುತ್ತಾ ಹೋಗುತ್ತಿವೆ ಎಂಬುದು ಅನುಭವದ ಮಾತಾಗಿದೆ. ಇಂಥ ಭ್ರಮೆಗಳಿಗೆ ಮಾನ್ಯತೆ ಕೊಡುತ್ತಾ ಹೋದರೆ ಪ್ರಗತಿಯೇ ಕುಂಠಿತವಾಗುವುದು. ಬಂಡವಾಳಶಾಹಿ ಸಮಾಜದಲ್ಲಿ ಇಂಥದೆಷ್ಟೋ ಭ್ರಮೆಗಳು ಇರುತ್ತವೆ. ಎಲ್ಲಿಯವರೆಗೆ ಮನುಷ್ಯರಿಗೆ ಇಂಥ ಭ್ರಮೆಗಳ ಕಾಟ ತಪ್ಪುವುದಿಲ್ಲವೋ ಅಲ್ಲಿಯ ವರೆಗೆ ಮಾನವನಿಗ ನಿಜವಾದ ಸ್ವಾಂತಂತ್ರ್ಯ, ನಿಜವಾದ ಮುಕ್ತಿಯ ಅನುಭವವೇ ಬರುವುದಿಲ್ಲ.

ಯಾವುದೇ ಒಬ್ಬ ವ್ಯಕ್ತಿಯ ಹಿತ ಎರಡನೆಯವರ ಹಿತಕ್ಕೆ ವಿರೋಧವಲ್ಲ ಎಂಬುದು ಸರ್ವೋದಯದ ವಿಚಾರ. ಮಾನವರ ಹಿತ ಒಬ್ಬರದು ಇನ್ನೊಬ್ಬರ ಹಿತಕ್ಕೆ ವಿರೋಧವಾಗಿಲ್ಲ. ಸೃಷ್ಟಿಯ ರಚನೆಯೇ ವಿಲಕ್ಷಣವಾಗಿದೆ. ಒಬ್ಬರು ಇನ್ನೊಬ್ಬರ ಹಿತವನ್ನು ಕಾಪಾಡುತ್ತಾ ನಡೆಯುವುದಾದರೆ ಎಲ್ಲರ ಹಿತವಾಗುವುದು. ಇದಕ್ಕಿರುವ ಉಪಾಯವೇನೆಂದರೆ ನಾನು ನನ್ನ ಚಿಂತೆಯನ್ನು ಮಾಡದೆ ನಿಮ್ಮ ಚಿಂತೆ ಮಾಡಬೇಕು ಮತ್ತು ನೀವು ನನ್ನ ಚಿಂತೆ ಮಾಡಬೇಕು. ಬ್ರಾಹ್ಮಣರು ಬ್ರಾಹ್ಮಣೇತರರ ಸೇವೆ ಮಾಡುವರು. ತಮಿಳುನಾಡಿನೊಂದಿಗೆ ಕೇರಳದ ಸಂಬಂಧ ಬಂದಾಗ ಕೇರಳೀಯರು ತಮಿಳುನಾಡಿನವರ ಚಿಂತೆ ಮೊದಲು ಮಾಡುವರು ಮತ್ತು ಅದೇ ಸಂದರ್ಭದಲ್ಲಿ ತಮಿಳುನಾಡಿನವರು ಕೇರಳೀಯರ ಚಿಂತೆ ಮಾಡುವರು. ಹಿಂದೂಸ್ಥಾನ ಪಾಕೀಸ್ತಾನದ ಚಿಂತೆ ಮಾಡುವುದು. ಪಾಕೀಸ್ತಾನ ಹಿಂದೂಸ್ಥಾನದ ಚಿಂತೆ ಮಾಡುವುದು. ಆದರೆ ಇದೇನಾಗುತ್ತಿದೆ?

ನಾನು ನನ್ನ ಚಿಂತೆ ಮಾತ್ರ ಮಾಡುತ್ತೇನೆ. ಆದ್ದರಿಂದ ಸ್ವಾರ್ಥಿಯಾಗುತ್ತೇನೆ. ನನ್ನ ಜಾತಿ ಜನರ ಸ್ವಲ್ಪ ಚಿಂತೆ ಮಾಡಿದರೆ ನನ್ನ ಸ್ವಾರ್ಥವೇನೋ ಸ್ವಲ್ಪ ಕಡಿಮೆಯಾಗುವುದು.ಆದರೆ ನಾನು ಪ್ರಾಂತೀಯವಾದಿಯಾಗುತ್ತೇನೆ. ಮುಂದೆ ನಾನು ನನ್ನ ಸ್ವಾರ್ಥವನ್ನು ಸ್ವಲ್ಪ ವ್ಯಾಪಕವಾಗಿ ಮಾಡುತ್ತೇನೆ. ಹಾಗು ನನ್ನ ರಾಷ್ಟ್ರದ ಬಗ್ಗೆ ಚಿಂತೆ ಮಾಡಿದರೆ ಸಂಕುಚಿತ ರಾಷ್ಟ್ರವಾದವಾಗುತ್ತದೆ. ಆದ್ದರಿಂದ ನಾನು ನನ್ನ ಚಿಂತೆ ಮಾಡದೆ ನಿಮ್ಮ ಚಿಂತೆ ಮಾಡಬೇಕು ಮತ್ತು ನೀವು ನನ್ನ ಚಿಂತೆ ಮಾಡಬೇಕು. ಇದು ಸರ್ವೋದಯ ವಿಚಾರ.

ಒಂದು ಪ್ರಶ್ನೆ ಹುಟ್ಟುತ್ತದೆ. ನಾನು ಎರಡನೆಯವರ ಚಿಂತೆ ಮಾಡುತ್ತೇನೆ ಆದರೆ ಅವರು ನನ್ನ ಚಿಂತೆ ಮಾಡುವುದಿಲ್ಲವೆಂದಾಗ ಏನಾಗುವುದು? ಇದು ಇದೇ ಸ್ಥಿತಿ ಇದೆ. ಭಾರತ ಪಂಚಶೀಲ ಒಪ್ಪುತ್ತದೆ. ಆದ್ದರಿಂದ ಅದು ಸೈನ್ಯ ಹೆಚ್ಚಿಸುವುದನ್ನು ಬಯಸುವುದಿಲ್ಲ. ಆದರೂ ಕೂಡ ಪಾಕಿಸ್ತಾನ ಸೈನ್ಯ ಹೆಚ್ಚಿಸುತ್ತಿರುವುದರಿಂದ ನಾವೂ ಕೂಡ ಸಿದ್ಧತೆಯಲ್ಲಿ ಇರಬೇಕಾಗಿದೆ.

ಇದರ ಅರ್ಥವೇನೆಂದರೆ ಕೋತಿಯ ಹಾಗೆ ಕುಣಿಯುವ ಶಕ್ತಿಯನ್ನು ನಾವು ಪಾಕಿಸ್ತಾನದ ಕೈಗೆ ಕೊಟ್ಟುಬಿಟ್ಟಿದ್ದೇವೆ. ಎದುರಿನಲ್ಲಿ ಸಾಧು ಇದ್ದರೆ ನಾವು

ಸಾಧು ಆಗುತ್ತೇವೆ. ಒಂದು ವೇಳೆ ದುಷ್ಟನಿದ್ದರೆ ದುಷ್ಟರಾಗುತ್ತೇವೆ! ಅಂದರೆ ನಾವು ದುಷ್ಟ ಅಥವಾ ಸಾಧು ಆಗುವ ಅಧಿಕಾರವನ್ನು ಎರಡನೆಯವರ ಕೈಗೆ ಕೊಟ್ಟುಬಿಟ್ಟಿದ್ದೇವೆ. ನಮ್ಮ ಕೈಯಲ್ಲಿ ಅಭಿಕ್ರಮ ಉಳಿಯಲಿಲ್ಲ. ಕರ್ಮಯೋಗಿಯ ಮುಖ್ಯ ಲಕ್ಷಣವೇ ಅಭಿಕ್ರಮವನ್ನು ತನ್ನ ಕೈಯಲ್ಲಿ ಇಟ್ಟುಕೊಳ್ಳುವುದಾಗಿದೆ. ಬಾಯಾರಿಕೆಯನ್ನು ನೀಗಿಸುವುದೇ ನೀರಿನ ಸ್ವಭಾವ. ಹಸು ಬಾಯಾರಿದಲ್ಲಿ ನದಿ ಅದರ ಬಾಯಾರಿಕೆಯನ್ನು ನೀಗಿಸುತ್ತದೆ. ಬಾಯಾರಿದ ಹುಲಿ ಬಂದರೆ ಅದರ ಬಾಯಾರಿಕೆಯನ್ನೂ ಈಡೇರಿಸುತ್ತದೆ. ಅಂದರೆ ಅದು ತನ್ನ ಸ್ವಭಾವವನ್ನು ತನ್ನ ಕೈಯಲ್ಲಿ ಖಾಯಂ ಆಗಿ ಇಟ್ಟುಕೊಂಡಿದೆ. ಒಳ್ಳೆಯ ಪುಸ್ತಕ ಓದುವುದಾದರೆ ಸೂರ್ಯ ಬೆಳಕು ಕೊಡುತ್ತಾನೆ ಮತ್ತು ರದ್ದಿ ಪುಸ್ತಕ ಓದುವುದಾದರೂ ಕೂಡ ಬೆಳಕು ಕೊಡುತ್ತಾನೆ. ಒಳ್ಳೆಯ ಪುಸ್ತಕ ಓದಿದರೆ ಮಾತ್ರ ಬೆಳಕು ಕೊಡುತ್ತೇನೆ. ರದ್ದಿ ಪುಸ್ತಕ ಓದಿದರೆ ಕತ್ತಲೆ ಮಾಡುತ್ತೇನೆ ಎಂದು ಸೂರ್ಯ ಹೇಳುವುದಿಲ್ಲ. ಒಂದು ವೇಳೆ ಸೂರ್ಯನೇನಾದರೂ ಆ ರೀತಿ ಮಾಡುವುದಾದರೆ ಅವನ ಕೈಯಲ್ಲಿ ಅಭಿಕ್ರಮ ಉಳಿಯುವುದಿಲ್ಲ. ಇದೇ ರೀತಿ ಸರ್ವೋದಯ ಅಭಿಕ್ರಮ ಇಟ್ಟುಕೊಳ್ಳುತ್ತದೆ. ಅದು ಒಳ್ಳೆಯ ಮಾತನ್ನು ಸ್ವಯಂಪ್ರಾರಂಭಿಸುತ್ತದೆ. ನೀವು ನನ್ನ ಚಿಂತೆಮಾಡಿ ಅಥವಾ ಬಿಡಿ. ನಾನು ನಿಮ್ಮ ಚಿಂತೆ ಮಾಡುವೆ. ಇಂಥ ನಿಶ್ಚಯವಿದ್ದರೆ ಮಾತ್ರ ಕೆಲಸವಾಗುವುದು.

ಸಮಾಜದಲ್ಲಿ ಸ್ವಾರ್ಥಕ್ಕಾಗಿ ಸಂಘರ್ಷವಾಗುತ್ತದೆ. ಅಂಥ ಸ್ಥಿತಿಯಲ್ಲಿ ನಾವು ಎಲ್ಲರ ಒಳಿತನ್ನು ಹೇಗೆ ಸಾಧಿಸುವುದು? ಅಂದರೆ ಸರ್ವೋದಯ ಹೇಗಾಗುವುದು? ಇಂದು ಸಮಾಜದಲ್ಲಿ ಸ್ಪರ್ಧೆ ಪರಸ್ಪರ ವಿರೋಧವಿರುತ್ತದೆ. ಪ್ರತಿಯೊಬ್ಬನು ಇನ್ನೊಬ್ಬನನ್ನು ಹಾಳು ಮಾಡಬಯಸುತ್ತಾನೆ. ನಾವು ಒಬ್ಬನಿಗೆ ಸಂತೋಷವುಂಟುಮಾಡಿದರೆ ಇನ್ನೊಬ್ಬರಿಗೆ ಕಷ್ಟವಾಗುತ್ತದೆ. ಹೀಗೆ ಪರಸ್ಪರ ವಿರೋಧಿ ಸ್ವಾರ್ಥಗಳ ಪರಿಸ್ಥಿತಿಯಲ್ಲಿ ನಾವು ಹೇಗೆ ಕೆಲಸಮಾಡಿದರೆ ಸರ್ವೋದಯವಾಗುವುದು? ಇದಕ್ಕಾಗಿ ಅಹಿಂಸೆಯನ್ನು ತರಬೇಕಾಗುವುದು, ಪ್ರೇಮದಿಂದ ಕೆಲಸಮಾಡಬೇಕಾಗುವುದು.

ಆತ್ಮದ ಏಕತೆ ಸರ್ವೋದಯದ ಅಡಿಪಾಯ. ಬೇರೆ ಸಿದ್ಧಾಂತಗಳು ಅದರದೇ ಒಂದು ಅಂಶ. ಅದೇನೆಂದರೆ ಆತ್ಮದಲ್ಲಿ ಭೇದವಿಲ್ಲ. ನಾವು ಏನೇ ಮಾಡಲಿ ಅದನ್ನು ಎಲ್ಲರ ಸಮಾಧಾನದೊಂದಿಗೆ ಮಾಡಬೇಕು. ಇದೊಂದು ಸಿದ್ಧಾಂತ. ಎರಡನೆ ಸಿದ್ಧಾಂತ. ನಾವು ನಮ್ಮ ವ್ಯಕ್ತಿಗತ ಒಡೆತನವನ್ನು ಇಟ್ಟುಕೊಳ್ಳುವಂತಿಲ್ಲ. ನಾವು ನಮ್ಮ ಎಲ್ಲ ವಸ್ತುಗಳನ್ನು ಸಮಾಜಕ್ಕೆ ಸಮರ್ಪಿತಮಾಡಬೇಕು. ಈ ಎರಡು ದೊಡ್ಡ ಸಿದ್ಧಾಂತಗಳು ಸರ್ವೋದಯದ್ದು, ಎರಡೂ ಒಟ್ಟುಗೂಡಿ ಅಹಿಂಸೆ. ಆದ್ದರಿಂದ ಸರ್ವೋದಯದ ಅಡಿಪಾಯ ಅಹಿಂಸೆಯ ಮೇಲೆ ಎಂದು ಹೇಳಲಾಗುತ್ತದೆ.

ನಾವು ವ್ಯಕ್ತಿಯ ಮಹತ್ವಕ್ಕೆ ಮಾನ್ಯತೆ ಕೊಡುತ್ತೇವೆ. ಯಾವುದೇ ವಿಚಾರವಾಗಲೀ ವ್ಯಕ್ತಿಯ ತಲೆಯಲ್ಲಿಯೇ ಹುಟ್ಟುತ್ತದೆ. ಅಲ್ಲಿಂದ ಅದು ಸಮಾಜದಲ್ಲಿ ಹರಡುತ್ತದೆ. ಎಲ್ಲ ಸ್ಥಳದಲ್ಲಿ ಇದನ್ನೇ ಕಾಣುತ್ತೇವೆ. ಸರ್ವೋದಯದಲ್ಲಿ ವ್ಯಕ್ತಿಗೆ ಅತ್ಯಂತ ಪ್ರತಿಷ್ಠೆ ಇದೆ. ಪ್ರತಿ ವ್ಯಕ್ತಿಗೆ ಸ್ಥಾನವಿದೆ. ಆದರೆ ಇತ್ತೀಚಿಗೆ ಬಹುಮತ ಅಲ್ಪಮತದವಾದ ಉತ್ಪನ್ನವಾಗಿದೆ. ಗ್ರೇಟೆಸ್ಟ್ ಗುಡ್ ಆಫ್ ದ ಗ್ರೇಟೆಸ್ಟ್ ನಂಬರ್– ಅಧಿಕಾಧಿಕ ಜನರ ಅಧಿಕಾಧಿಕ ಒಳ್ಳೆಯದಾಗಬೇಕು ಎಂಬ ತತ್ವಜ್ಞಾನದ ಕಾರಣದಿಂದ ಈ ಜಗಳ ಹುಟ್ಟಿಕೊಂಡಿದೆ.

ಸರ್ವೋದಯದ ತತ್ವಜ್ಞಾನ ಒಟ್ಟಾರೆಯಾಗಿ ಸಮನ್ವಯಾತ್ಮಕ. ಅಂದರೆ ಎಲ್ಲ ವಿಚಾರವಂತರನ್ನು ಒಂದು ಕಡೆ ಕಲೆ ಹಾಕುವ ಶಕ್ತಿ ಸರ್ವೋದಯ ವಿಚಾರದಲ್ಲಿದೆ. ಹಿಂದೂಸ್ಥಾನದ ಸಂಸ್ಕೃತಿಯಲ್ಲಿ ಸಮನ್ವಯ ಅದರ ರೋಮರೋಮದಲ್ಲಿ ಅರಳಿದೆ. ಅದರ ಪೂರ್ಣತೆ ಸರ್ವೋದಯದ ವಿಚಾರದಿಂದಲೇ ಆಗಬಲ್ಲದು. ಯಾರೊಬ್ಬರ ವಿರುದ್ಧ ಇರುವುದಕ್ಕೆ ಸರ್ವೋದಯದಲ್ಲಿ ಕಾರಣವೇ ಇಲ್ಲ. ಆದರೆ ಯಾರು ಎಲ್ಲರ ಉದಯ ಆಗಕೂಡದೆಂದು ತಿಳಿಯುತ್ತಾರೋ ಅಂಥವರೆಲ್ಲರ ವಿರೋಧ ಅದರದ್ದಾಗಿದೆ. ಕೆಲವೇ ಜನರದ್ದಾಗಿರಬಹುದು ಮತ್ತು ವಿಶಿಷ್ಟರದ್ದಾಗಿರಬಹುದು. ಕೆಲ ಜಾತಿಯ ಜನರು ಶ್ರೇಷ್ಠರಿದ್ದಾರೆ ಹಾಗೂ ಅವರ ಕೈಯಲ್ಲೇ ಅಧಿಕಾರ ಇರಬೇಕು ಎಂದು ಯಾರು ಹೇಳುತ್ತಾರೋ ಅಂಥವರ ವಿರುದ್ಧ ಸರ್ವೋದಯವಿದೆ. ಯಾರು ಯಾವುದೇ ವರ್ಗದ್ದೇ ವಿಶೇಷ ಉನ್ನತಿಯನ್ನು ಮುಖ್ಯವೆಂದು ಭಾವಿಸುತ್ತಾರೊ ಆ ವರ್ಗ ಬಹುಸಂಖ್ಯಾತರಾಗಿದ್ದಿರಬಹುದು ಅಥವಾ ಅಲ್ಪಸಂಖ್ಯಾತರಾಗಿದ್ದಿರಬಹುದು ಮತ್ತು ಯಾರು ಬೇರೆಯವರ ಇರುವಿಕೆಯನ್ನು ಒಪ್ಪುವುದಿಲ್ಲವೋ ಅಂಥವರ ವಿರೋಧ ಸರ್ವೋದಯ ಮಾಡುತ್ತದೆ. ಒಂದು ವೇಳ ಅದು ವಿರೋಧ ಮಾಡದೆ ಇದ್ದರೆ ಅದರ ಪ್ರಯೋಜನವಾದರೂ ಏನು? ಪ್ರಕಾಶ ಒಂದು ವೇಳೆ ಅಂಧಕಾರದ ವಿರೋಧ ಮಾಡದೆ ಇದ್ದರೆ ಅದು ತನ್ನನ್ನೇ ತಾನು ಉಚ್ಛೇದಿಸಿಕೊಳ್ಳುತ್ತದೆ. ಆದ್ದರಿಂದ ಇಷ್ಟೊಂದು ವಿರೋಧವಂತೂ ಇದ್ದೇ ಇರುತ್ತದೆ. ಇನ್ನುಳಿದಂತೆ ಬೇರೆಲ್ಲಾ ವಿಚಾರ ಪ್ರವಾಹ ಸರ್ವೋದಯದಲ್ಲಿ ಸೇರುತ್ತವೆ.

ಸರ್ವೋದಯದ ತತ್ವಜ್ಞಾನದ ಪೋಷಣೆಮಾಡುವಂಥ ಒಂದು ರಚನಾತ್ಮಕ ಕಾರ್ಯಕ್ರಮವನ್ನು ಕೂಡ ಗಾಂಧೀಜಿ ನಡೆಸಿದ್ದಾರೆ. ಇಂದಿನ ಯುಗದ ಅವಶ್ಯಕತೆ ಮತ್ತು ಸರ್ವಕಾಲದ ಅವಶ್ಯಕತೆ ಎರಡನ್ನೂ ನೋಡಿದಾಗ ಅದೊಂದು ಸುಂದರ ಮತ್ತು ಪರಿಪೂರ್ಣ ಕರ್ಮಯೋಗ. ಕೇವಲ ತತ್ವಜ್ಞಾನ ಗಾಳಿಯಲ್ಲಿ ಇರುತ್ತದೆ. ಕೇವಲ ಕರ್ಮಯೋಗ ಎತ್ತರಕ್ಕೆ ಏರಲಾರದು, ಭೂಮಿಗೆ ಅಂಟಿಕೊಂಡೇ ಇರುತ್ತದೆ. ಆದ್ದರಿಂದ ಎಲ್ಲಿ ತತ್ವಜ್ಞಾನಯುಕ್ತ ಕರ್ಮಯೋಗ ಮತ್ತು ಕರ್ಮಯೋಗಯುಕ್ತ ತತ್ವಜ್ಞಾನದ ಅಂದರೆ ಆಚಾರ ಮತ್ತು ವಿಚಾರ ಎರಡರ ಹೊಂದಿಕೆಯಾಗುತ್ತದೋ ಅಲ್ಲಿ ಮಾನವತೆಯ ದರ್ಶನವಾಗುತ್ತದೆ. ಹೀಗಿದೆ ಈ ಮಾನವ ಮೂರ್ತಿ. ಪಾದ ಭೂಮಿಗೆ ಅಂಟಿಕೊಂಡಿರುತ್ತದೆ ಮತ್ತು ಮಸ್ತಕ ಗಗನ ವಿಹಾರಿ. ಈ ಎರಡೂ ವಿಷಯಗಳಿಲ್ಲದೆ ಜೀವನ ಪೂರ್ಣವಾಗುವುದಿಲ್ಲ.

* * *

ಅಭಿವೃದ್ಧಿಯ ಮೂಲಬಲ – ಯುವಶಕ್ತಿ

– ಕಾಕುಂಜೆ ಕೇಶವ ಭಟ್ಟ

ಮೊನ್ನೆ ಸ್ವಾತಂತ್ರ್ಯದಿನಾಚಾರಣೆಯ ಸಂದರ್ಭದಲ್ಲಿ ಕೆಲವು ಮಂದಿ ಯುವಕರು ಸೇರಿದ್ದ ಗುಂಪೊಂದಕ್ಕೆ ಸ್ವಾತಂತ್ರ್ಯದ ಮಹತ್ವದ ಬಗ್ಗೆ ಮಾತನಾಡಲು ಅವಕಾಶ ದೊರಕಿತ್ತು. ಕಾರ್ಯಕ್ರಮ ಮುಗಿದ ನಂತರ ಅಲ್ಲಿ ಸೇರಿದ್ದ ಯುವಕರು ನನ್ನನ್ನು ಸುತ್ತುಗಟ್ಟಿ ಪ್ರಚಲಿತ ವಿಷಯಗಳ ಕುರಿತು ಚರ್ಚಿಸತೊಡಗಿದರು. ಅವರು ಮಾತನಾಡುವಾಗ ದೇಶದ ಭವಿಷ್ಯದ ಬಗ್ಗೆ ಅವರು ತೋರುತ್ತಿದ್ದ ಆತಂಕ, ಅಸಮಾಧಾನ, ಉದ್ವೇಗಗಳನ್ನು ಗಮನಿಸಿದಾಗ ನನಗೆ ಅನಿಸಿದ್ದು, ಅವರು ತಮ್ಮ ಮಾತೃಭೂಮಿಯ ಭವಿಷ್ಯದ ಬಗ್ಗೆ ಅತ್ಯಂತ ಚಿಂತಿತರಾಗಿದ್ದಾರೆ ಎಂದು. ಅವರಲ್ಲಿ ಕೆಲವರು ದೇಶದಲ್ಲಿ ವ್ಯಾಪಕವಾಗಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಬಗ್ಗೆ ಆಕ್ರೋಶದಿಂದ ಮಾತನಾಡಿದರೆ, ಇನ್ನು ಕೆಲವರು ವಿದೇಶೀ ಕಂಪನಿಗಳ ಮತ್ತು ವಿದೇಶೀ ವಸ್ತುಗಳ ದಾಳಿಯ ಕುರಿತು ತಮ್ಮ ಅಸಮಾಧಾನವನ್ನು ಹೊರಹಾಕಲು ಹಪಹಪಿಸುತ್ತಿದ್ದರು. ರುಪಾಯಿಯ ಅಪಮೌಲ್ಯ, ಹತೋಟಿಗೆ ಬಾರದ ಬೆಲೆಯೇರಿಕೆ, ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳು, ಇತ್ಯಾದಿ ವಿಷಯಗಳನ್ನು ಕುರಿತು ನನ್ನೊಡನೆ ಚರ್ಚಿಸಲು ಅವರು ತವಕಿಸುತ್ತಿದ್ದರು. ಒಟ್ಟಿನಲ್ಲಿ ಹೇಳುವುದಾದರೆ, ಅವರು ತುರ್ತಾಗಿ ದೇಶದಲ್ಲಿ ಒಂದು ಆಮೂಲಾಗ್ರ ಬದಲಾವಣೆಯನ್ನು ಬಯಸುತ್ತಿದ್ದಾರೆ; ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಬಯಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ಎದ್ದುತೋರುತ್ತಿತ್ತು.

ನಗರ ಜೀವನ ಎಂದರೆ ಅದು ಧಾವಂತದ ಜೀವನ. ನಗರ ವಾಸಿಗಳು ಸ್ವಂತದ ಜೀವನವನ್ನು ನಡೆಸುವುದಕ್ಕಾಗಿಯೇ ಬದುಕಿನ ಉದ್ದಕ್ಕೂ ಬಿಡುವಿಲ್ಲದಂತೆ ಹೋರಾಟ ನಡೆಸಬೇಕಾಗುತ್ತದೆ. ಅದಕ್ಕಾಗಿ ದಿನದ ಇಪ್ಪತ್ತನಾಲ್ಕು ಗಂಟೆಯೂ ಅವರಿಗೆ ಸಾಕಾಗುವುದಿಲ್ಲ. ಅದರಲ್ಲೂ ಜಗತ್ತಿನಲ್ಲಿ ಒಂದು ಸೈಬರ್ ಕ್ಯಾಪಿಟಲ್ ಎಂದೇ ಪ್ರಸಿದ್ಧವಾಗಿರುವ ಪ್ರತಿಷ್ಠಿತ ನಗರ ಬೆಂಗಳೂರಿನ ಯುವಕರು ಈ ರೀತಿಯಾಗಿ ದೇಶದ ಬಗೆಗೆ ಅತ್ಯಂತ ಕಾಳಜಿಯುಳ್ಳವರಾಗಿದ್ದಾರೆ ಎಂದರೆ ಯಾರಿಗೂ ಆಶ್ಚರ್ಯವಾಗದಿರದು.

ಒಂದು ದೇಶದ ಮೂಲಬಲಕ್ಕೆ ಆಧಾರವಾಗಿರುವುದು ಅದರ ಯುವಶಕ್ತಿ. ಯುವಶಕ್ತಿ ನಿಷ್ಕ್ರಿಯವಾದರೆ, ದುರ್ಬಲವಾದರೆ ಆ ದೇಶದ ಭವಿಷ್ಯವೂ ನಿರಾಶಾದಾಯಕವಾಗುವುದರಲ್ಲಿ ಸಂಶಯವಿಲ್ಲ.

ಯುವಶಕ್ತಿಯಲ್ಲಿ ಅಗಾಧವಾದ ಶಕ್ತಿ–ಸಾಮರ್ಥ್ಯ ಅಡಗಿದೆ. ಸರಿಯಾದ ರೀತಿಯಲ್ಲಿ ಅದನ್ನು ಬಳಸಿಕೊಂಡರೆ ರಾಷ್ಟ್ರನಿರ್ಮಾಣದ ಕಾರ್ಯವನ್ನು

ಅದ್ಭುತವಾಗಿ ನಾವು ಸಾಧಿಸಬಹುದಾಗಿದೆ. ಡೈನಮೈಟ್‌ಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದಾಗ ಅದರಿಂದ ಕಟ್ಟಡಗಳನ್ನು, ಶಾಲೆ-ಮನೆಗಳನ್ನು, ಕೆರೆ-ಕಟ್ಟೆಗಳನ್ನು, ಅಣೆಕಟ್ಟೆಗಳನ್ನು, ರಸ್ತೆಗಳನ್ನು ಇತ್ಯಾದಿ ಹಲವು ರೀತಿಯ ಮನುಕುಲಕ್ಕೆ ಉಪಕಾರಿಯಾದ ಕಾರ್ಯಗಳನ್ನು ಮಾಡಬಹುದು. ಅಂತೆಯೇ, ಅದರ ಉಪಯೋಗದ ಉದ್ದೇಶವೇ ವ್ಯತ್ಯಯವಾದಾಗ ಅದು ಮಾರಕವೂ ಆಗಬಲ್ಲದು.

ರಾಷ್ಟ್ರನಿರ್ಮಾಣದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಕಡೆಗ್ಗಣಿಸಬಾರದು. ಯುವ ಶಕ್ತಿಯಲ್ಲಿ ಯಾಕೆ ಅಂಥ ಒಂದು ಅದ್ಭುತ ಸಾಮರ್ಥ್ಯ ಅಡಗಿದೆ? ಎಂದರೆ, ಮೊದಲನೆಯದಾಗಿ, ನಮ್ಮ ಯುವಕರು ಆದರ್ಶವಂತರಾಗಿರುತ್ತಾರೆ.

ಈ ಜಗತ್ತಿನಲ್ಲಿ ಸಾಧಿಸಬೇಕಾಗಿರುವ, ಗೆಲ್ಲಬೇಕಾಗಿರುವ, ಮಾಡಬೇಕಾಗಿರುವ ಕಾರ್ಯಗಳೂ, ಸಾಹಸಗಳೂ ಬಹಳಷ್ಟಿವೆ. ನಮ್ಮ ಯುವ ಸ್ನೇಹಿತರನೇಕರು ಇನ್ನೂ ಕೂಡ ಯಾವುದನ್ನು ಮಾಡಬೇಕಾಗಿದೆ, ಯಾವುದನ್ನು ಮಾಡಬಾರದು ಎಂಬುದನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಆದರೆ ಜೀವನದಲ್ಲಿ ನಿರಾಶಾದಾಯಕ ಕ್ಷಣಗಳನ್ನು ಮತ್ತು ಸೋಲುಗಳನ್ನು ಕಾಣುತ್ತಿದ್ದರೂ ಅವರು ನಿಶ್ಶಕ್ತರಾಗಿಲ್ಲ ಎಂಬುದು ಬಹು ಮಹತ್ವದ ಸಂಗತಿ. ಅವರಿಗೆ ಸರಿಯಾದ ಮಾರ್ಗದರ್ಶನ ದೊರೆತುದಾದರೆ ಅವರು ಖಂಡಿತಕ್ಕೂ ಅದ್ಭುತವಾದ ಕಾರ್ಯಗಳನ್ನು ಸಾಧಿಸಬಲ್ಲರು.

ಎರಡನೆಯದಾಗಿ, ನಮ್ಮ ಯುವಕರಲ್ಲಿ ಅಸೀಮ ಸಾಮರ್ಥ್ಯ ಅಡಗಿದೆ.

ನಮ್ಮ ಹೆಮ್ಮೆಯ ಯುವಕರು ತಾವು ಗಾಢವಾಗಿ ನಂಬಿದ ಆದರ್ಶವನ್ನು, ಗುರಿಯನ್ನು ಸಾಧಿಸುವ ಕಾರ್ಯದಲ್ಲಿ ಎಂದಿಗೂ ಬಳಲುವುದೂ ಇಲ್ಲ. ಉತ್ಸಾಹಹೀನರಾಗುವುದೂ ಇಲ್ಲ; ಅವರು ಯಾವತ್ತೂ ಸ್ಫೂರ್ತಿಯ ಚಿಲುಮೆಯಂತೆಯೇ ಇರುತ್ತಾರೆ. ಉಳಿದ ಹಿರಿಯರಂತೆ ನಾವು ಮಾಡಬೇಕಾಗಿರುವುದನ್ನು ಸಾಕಷ್ಟು ಮಾಡಿ ಬಳಲಿದ್ದೇವೆ; ಈಗ ಸ್ವಲ್ಪ ವಿಶ್ರಾಂತಿ ಬೇಕು-ಎಂದು ಅವರಿಗೆ ಯಾವತ್ತೂ ಅನಿಸುವುದಿಲ್ಲ.

ಇನ್ನು ಮೂರನೆಯದಾಗಿ, ನಮ್ಮ ದೇಶದ ಭವಿಷ್ಯವನ್ನೇ ತಮ್ಮಲ್ಲಿ ಅಡಗಿಸಿಕೊಂಡಿರುವ, ಯುವಕರ ಮನ್ನಸ್ಸು ಕುಂಬಾರ ಮಡಕೆ ಮಾಡಲೆಂದು ಕಲಸಿಟ್ಟ ಹದವಾದ ಮಣ್ಣಿನಂತಿದೆ; ಒಂದು ಶುಭ್ರವಾದ ಹಾಳೆಯಂತಿದೆ. ಅದು ಪವಿತ್ರವಾಗಿದೆ, ಪರಿಶುದ್ಧವಾಗಿದೆ.

ನಮ್ಮ ಯುವಕರು ಹಿರಿಯರು ಹೊಂದಿರುವಂತೆ ಅಥವಾ ತಿಳಿದುಕೊಂಡಿರುವಂತೆ ಖಂಡಿತವಾಗಿಯೂ ಪೂರ್ವಗ್ರಹಗಳನ್ನು ಹೊಂದಿರುವುದಿಲ್ಲ. ಅವರು ಸದಾ ತೆರೆದ ಮನಸ್ಸು ಉಳ್ಳವರಾಗಿರುತ್ತಾರೆ.

ಆದರೆ, ಕೆಲವೊಮ್ಮೆ ಅವರ ಈ ಗುಣವೇ ಅಪಾಯಕ್ಕೆ

ಎಡೆಮಾಡಿಕೊಡುತ್ತದೆ. ಕೆಲವೊಮ್ಮೆ ಕೆಲವು ಗಂಭೀರ ವಿಷಯಗಳ ಕುರಿತು ಅವರು ಅತಿ ಮುಗ್ಧರಾಗಿರುತ್ತಾರೆ. ಅವರಲ್ಲಿ ಅನುಭವದ ಮೌಲ್ಯಗಳ ಕೊರತೆಯಿರುತ್ತದೆ. ಆದ್ದರಿಂದ ಅವರೂ, ಹಿರಿಯರು ಅನುಭವಿಸಿದ, ಅಪಾಯಕರ ಪ್ರಚೋದನೆಗಳಿಗೆ ಬಲಿಯಾಗುವ ಸಾಧ್ಯತೆಗಳು ಅಧಿಕವಾಗಿವೆ. ಮಾತ್ರವಲ್ಲ, ಸಾಮಾನ್ಯವಾಗಿ ಯುವಕರು, ಹಿರಿಯರು ನೀಡುವ ತಪ್ಪು-ಒಪ್ಪುಗಳ ಕುರಿತಾದ ಸಲಹೆಗಳಿಗೆ ಕಿವಿಗೊಡುವುದಿಲ್ಲ; ಯಾಕೆಂದರೆ ಅವರು ತಮ್ಮ ಆದ್ಯತೆಗಳ ಬಗ್ಗೆ ಅಷ್ಟೊಂದು ಬದ್ಧರಾಗಿರುತ್ತಾರೆ.

ಆದ್ದರಿಂದ ಯುವಶಕ್ತಿಯ ಸದ್ಬಳಕೆಗೆ ಹಿರಿಯರು ಮತ್ತು ಕಿರಿಯರು ಕೆಲವೊಂದು ಸ್ವಾನುಶಾಸನಗಳನ್ನು ಪಾಲಿಸುವುದು ಉಚಿತವಾದೀತು:

೧. ನಾವು ಹಿರಿಯರು ನಮ್ಮ ಪ್ರೀತಿಯ ಯುವಕರ ಆದರ್ಶಗಳನ್ನು ಚಿವುಟಿಹಾಕದಿರೋಣ.

ದೇಶಕ್ಕಾಗಿ ತ್ಯಾಗಮಾಡಲು ನಮಗೆ ಯುವಕರ ಉತ್ಸಾಹ ಮತ್ತು ಅವರೊಳಗಿನ ಕೆಚ್ಚಿನ ಅವಶ್ಯಕತೆಯಿದೆ. ಅವರ ಶಕ್ತಿ-ಸಾಮರ್ಥ್ಯಗಳ ಅವಶ್ಯಕತೆಯಿದೆ. ಆದ್ದರಿಂದ ನಾವು ಹಿರಿಯರು ಯಾವತ್ತೂ ಅವರಿಗೆ 'ಇದೆಲ್ಲ ನಾವು ಮೊದಲೇ ಮಾಡಿಬಿಟ್ಟಿರುವುದು, ಆದ್ದರಿಂದ ಏನೂ ಪ್ರಯೋಜನವಿಲ್ಲ' ಎಂದು ಹೇಳದೆ ಸ್ವಲ್ಪ ತಾಳ್ಮೆಯಿಂದ ಇರುವುದನ್ನು ಅಭ್ಯಾಸ ಮಾಡೋಣ.

ನಮ್ಮ ಯುವಕಮಿತ್ರರನ್ನು ಯಾವತ್ತಿಗೂ ನಿರುತ್ಸಾಹಗೊಳಿಸದೇ ಇರೋಣ. ನಾವು ಯಾರೂ, ಯಾವತ್ತೂ, ನಮ್ಮ ಯುವಶಕ್ತಿಯನ್ನು ನಿರ್ಲಕ್ಷಿಸದೇ ಇರೋಣ.

೨. ನಾವು ಯುವಕರು ನಮ್ಮ ಹೆಮ್ಮೆಯ ಹಿರಿಯ ಆದರ್ಶಗಳನ್ನು ಆದರಿಸುವ ಅವಶ್ಯಕತೆ ಇದೆ.

ವಿಶೇಷವಾಗಿ ನಾವೆಲ್ಲರೂ ಭಾರತಮಾತೆಯ ಸುಪುತ್ರರು; ನಾವೆಲ್ಲರೂ ಒಂದೇ ಕುಟುಂಬದ ಸದಸ್ಯರು. ನಮ್ಮ ಹಿರಿಯರು ತಮ್ಮ ಸಾಮಾಜಿಕ ಜೀವನದಲ್ಲಿ ಬಹಳಷ್ಟು ಅನುಭವಗಳನ್ನು ಗಳಿಸಿದ್ದಾರೆ; ಅವರು ನಮಗಿಂತ ಹೆಚ್ಚು ಅನುಭವಶಾಲಿಗಳಾಗಿದ್ದಾರೆ, ತಿಳುವಳಿಕೆಯನ್ನು ಹೊಂದಿದ್ದಾರೆ. ಆದ್ದರಿಂದ ಅವರ ಪ್ರಬುದ್ಧ ಸಲಹೆ-ಸಹಕಾರಗಳನ್ನು ಪಡೆಯೋಣ ಮತ್ತು ಅವರು ನೀಡುವ ಎಚ್ಚರಿಕೆಯ ಮಾತುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸ್ವೀಕರಿಸೋಣ. ಅವರು ನಿಜವಾಗಿಯೂ ದೇಶದ ಒಳಿತನ್ನೇ ಆಶಿಸುತ್ತಾರೆ ಎಂದಾದರೆ ನಾವು ಖಂಡಿತಕ್ಕೂ ಅವರನ್ನು ಗೌರವಿಸೋಣ. 'The silver-haired head is a crown of glory, if it is found in the way of righteousness'. ನ್ಯಾಯಬದ್ಧ ಸಲಹೆಗಳನ್ನು ನೀಡುವ ಪ್ರತಿಯೊಬ್ಬ ಹಿರಿಯರೂ ಕೂಡ ಗೌರವಾರ್ಹರು; ಅವರೆಲ್ಲರೂ ನಮ್ಮ ಹೆಮ್ಮೆಯ ಹಿರಿಯರು.

೩. ಯುವಕಮಿತ್ರರೇ, ದೇಶಕ್ಕಾಗಿ, ನಮ್ಮ ಸಮಜಕ್ಕಾಗಿ ಎದ್ದುನಿಲ್ಲೋಣ.

ಕಾಲಬದಲಾಗಿದೆ ಎಂದು ಹೇಳುತ್ತಾ, ಹೊಸತು ಎನ್ನುವ ಕಾರಣಕ್ಕಾಗಿ ಅದರ ಅಂಧಾನುಕರಣೆಯನ್ನು ಮಾಡದಿರೋಣ. ನಮ್ಮ ಬಗ್ಗೆ ಎಚ್ಚರಿಕೆಯಿಂದಿರೋಣ. ಜೊತೆಜೊತೆಗೆ ತತ್ವ-ಸಿದ್ಧಾಂತಗಳನ್ನೂ ಎಚ್ಚರಿಕೆಯಿಂದ ಪರಿಶೀಲಿಸೋಣ. ಅವು ನಮ್ಮೀರಾಷ್ಟ್ರವನ್ನು ಪರಮ ವೈಭವದ ಕಡೆಗೆ ಒಯ್ಯುವುದಾದರೆ ಮಾತ್ರ ಸ್ವೀಕರಿಸೋಣ. ಅನಂತರವಷ್ಟೆ ಅಂಥ ತತ್ವ-ಸಿದ್ಧಾಂತಗಳನ್ನು ಆದರ್ಶವಾಗಿ ಸ್ವೀಕರಿಸಿ ಅದಕ್ಕೆ ಬದ್ಧರಾಗಿ ಜೀವನವನ್ನೇ ಸಮರ್ಥಿಸೋಣ.

೪. ನಮ್ಮ ಸೌಭಾಗ್ಯದ ಯುವ ಪೀಳಿಗೆ ಆದರ್ಶ ಮಾದರಿಯನ್ನು ಹಾಕಿಕೊಡುವಂತಾಗಲಿ.

ಹಿರಿಯರು ನಮ್ಮನ್ನು ಅರ್ಥಾತ್ ಯುವಶಕ್ತಿಯನ್ನು ಸದಾ ಎಚ್ಚರಿಕೆಯಿಂದ ಗಮನಿಸಿರುತ್ತಾರೆ; ನಾವು ಎಂತಹ ಆದರ್ಶವನ್ನು ಹಾಕಿಕೊಳ್ಳುತ್ತಿದ್ದೇವೆ ಎಂದು ನಾವು ಯುವಕರು ಮಾತೃಭೂಮಿಯ ಪರಮ ವೈಭವವನ್ನು ಸಾಧ್ಯವಾಗಿಸುವಂಥ ಉನ್ನತವಾದ ಒಂದು ಆದರ್ಶವನ್ನು ಹಾಕಿಕೊಂಡು, ಅನವರತ ಅದಕ್ಕಾಗಿ ಕಾರ್ಯನಿರತರಾಗಬೇಕಿದೆ; ಅತ್ಯುನ್ನತ ಜೀವನ ಮೌಲ್ಯಗಳನ್ನು ಪಾಲಿಸಬೇಕಾಗಿದೆ. ನಿಜವಾದ ದೇಶಭಕ್ತರಂತೆ ನಾವು ಬದುಕದಿದ್ದರೆ ನಮ್ಮನ್ನು ಯಾರೂ ಗೌರವಿಸಲಾರರು; ನಮ್ಮ ಬಗ್ಗೆ ಹೆಮ್ಮೆ ಪಡಲಾರರು.

ನಮಗೆ ಗೆಲ್ಲುವ ಹಂಬಲ ಇರಬೇಕು. ನ್ಯಾಯಬದ್ಧವಾಗಿ ನಮ್ಮ ರಾಷ್ಟ್ರವನ್ನು ಜಗತ್ತಿನಲ್ಲೇ ಪರಮ ವೈಭವದ ಕಡೆಗೆ ಕೊಂಡೊಯ್ಯುವ ಉತ್ಕಟೇಚ್ಛೆಯಿರಬೇಕು. ನಾವು ಒಂದು ಗೌರವಾನ್ವಿತ ನಾಗರಿಕತೆಯ ವಾರಸುದಾರರು ಎಂಬ ಹೆಮ್ಮೆ ಇರಬೇಕು. ನಮಗೆ ನ್ಯಾಯಬದ್ಧವಾಗಿ ಈ ಜಗತ್ತಿನಲ್ಲಿ ಅತ್ಯುನ್ನತ ಸ್ಥಾನವನ್ನು ಹೊಂದಲು ಎಲ್ಲ ಅರ್ಹತೆಗಳೂ ಇವೆ. ಎಂಬ ದೃಢವಾದ ಆತ್ಮವಿಶ್ವಾಸವೂ, ಅಚಲವಾದ ನಂಬಿಕೆಯೂ ಇರಬೇಕು.

ಹಾಗಾದಾಗ ಮಾತ್ರ ನಮ್ಮ ಕನಸಿನ ಅಭಿವೃದ್ಧಿ ಸಾಧ್ಯವಾದೀತು, ಸಾರ್ಥಕವಾದೀತು. (ಸಾಭಾರ : ಉತ್ಥಾನ)

* * *

ಋಣ ಭಾರ(ತ)

- ಎನ್.ಎಲ್.ಆನಂದ

'ಮಗಾ, ಉಪವಾಸ ಇದ್ರೂ ಪರವಾಗಿಲ್ಲ. ಸಾಲ ಮಾಡಿ ಮತ್ತೊಬ್ಬರ ಅಡಿಯಾಳಾಗಬೇಡ' ಅಂತ ಅಜ್ಜಿಯೊಬ್ಬರು ಹೇಳುತ್ತಿದ್ದರು. ಅದನ್ನೇ, ಚಿಂತಕ 'ರಾಲ್ಫ್ ವಾಲ್ಡೊ ಎಮರ್ಸನ್'ರವರು 'ಸಾಲದಲ್ಲಿರುವ ವ್ಯಕ್ತಿಯು ದಾಸ್ಯದಲ್ಲಿರುವಂತೆಯೇ' ಎಂದು ಎಚ್ಚರಿಸಿದ್ದಾರೆ. ಹಿಂದೆ ಕಾಲವೊಂದಿತ್ತು. ಸಾಲ ಮಾಡುವುದು ಆತ್ಮಗೌರವಕ್ಕೆ ಚ್ಯುತಿ ಎಂಬುದಾಗಿತ್ತು. ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದ ಸಾಲ ತೆಗೆದುಕೊಳ್ಳಬೇಕಾಗಿ ಬಂದರೂ, ಹೇಳಿದ ಸಮಯಕ್ಕೆ ತಪ್ಪದೇ ಹಿಂದಿರುಗಿಸಿ ಋಣ ಮುಕ್ತರಾಗುತ್ತಿದ್ದರು. ಆದರೆ, ಇಂದು ಸಾಲವೆಂಬುದು ಮೌಲ್ಯಗಳನ್ನು ಪ್ರತಿಬಿಂಬಿಸುವ ಅಂಶವಾಗದೇ, ವ್ಯವಹಾರದ ಪ್ರತೀಕದಂತಿದೆ. ಇಂದಿನ ಪೀಳಿಗೆಯು 'ಸಾಲವೇ ದೇವರೆಂದು' ನಂಬಿದ್ದಾರೆ. ಅದರಲ್ಲೂ ಕೊಳ್ಳುಬಾಕ ಸಂಸ್ಕೃತಿ ಬಂದಮೇಲೆ, ಕ್ರೆಡಿಟ್ ಕಾರ್ಡ್‌ಗಳ ದಾಳಿಯಿಂದ ಹಾಸಿಗೆಯಿದ್ದಷ್ಟು ಕಾಲು ಚಾಚು ಎಂಬ ಹಿರಿಯರ ಹಿತನುಡಿ ದೂರಾಗಿ, 'ಸಾಲ ಮಾಡಿಯಾದರೂ ತುಪ್ಪ ತಿನ್ನುವ' ಮನೋಭಾವ ಬೆಳೆದಿದೆ. ಅದಕ್ಕಾಗಿಯೇ, ಇಂದು ನಾವು 'ಸಾಲವಿಲ್ಲದ ಮನೆಯ ಸಾಸಿವೆ ತನ್ನಿ' ಎಂದು ಸವಾಲೆಸೆಯಬಹುದು.

'ಏನ್ರೀ ಹೀಗನ್ತೀರಿ? ನಾವು ಯಾವುದೇ ಸಾಲ ಮಾಡಿಲ್ಲ ಗೊತ್ತಾ?' ಎಂದು ನೀವು ಪ್ರಶ್ನಿಸಿದರೇ, ನೀವು ವಿಶಾಲವಾಗಿ ಚಿಂತಿಸಿಲ್ಲ ಎಂಬ ನಿರ್ಧಾರಕ್ಕೆ ಬರಬೇಕಾಗುತ್ತದೆ. ನಿಮ್ಮ ತಲೆಯ ಮೇಲೆ ೩೩,೦೦೦ ಸಾವಿರ ರುಪಾಯಿ ಸಾಲ ಇದೆ!. ಆಶ್ಚರ್ಯವೇ? ಆದರೂ ಇದು ನಿಜ. ಸರ್ಕಾರದ ಆರ್ಥಿಕ ಇಲಾಖೆಯ ಅಂಕಿ ಅಂಶಗಳಂತೆ, ಭಾರತದಲ್ಲಿ ಈ ಕ್ಷಣದಲ್ಲಿ ಹುಟ್ಟಿದ ಮಗುವಿನ ಮೇಲೂ ೩೩,೦೦೦ ಸಾವಿರ ಸಾಲ ಬಳುವಳಿಯಾಗಿ ಸಿಗುತ್ತಿದೆ. ಮತ್ತೂ ಕೆಲವು ಅಂಕಿ ಅಂಶಗಳು ನಿಮ್ಮ ಹುಬ್ಬೇರಿಸಬಹುದು: ೨೦೧೨ರಹೊತ್ತಿಗೆ ನಮ್ಮ ಸರ್ಕಾರ ಮಾಡಿರುವ ಸಾಲದ ಪ್ರಮಾಣ ೩೫,೭೮೨೪೩.೬ ಕೋಟಿ, ಇದರಲ್ಲಿ ಆಂತರಿಕ ಸಾಲದ ಪ್ರಮಾಣ ೩೨.೨೩೯,೨೨ಕೋಟಿಯಷ್ಟಿದ್ದರೆ, ಬಾಹ್ಯ ಹಣಕಾಸು ಸಂಸ್ಥೆಗಳಿಂದ ೩,೫೪,೪೨೧.೬ ಕೋಟಿ! ೨೦೧೧ ರ ಜೂನ್ ನಲ್ಲಿ ಇದರ ಪ್ರಮಾಣ, ೩.೧೫ ಲಕ್ಷ ಕೋಟಿ ಇತ್ತು. ಇದರಲ್ಲಿ ಪ್ರಮುಖ ಹಣಕಾಸು ಸಂಸ್ಥೆಯಾದ ಐ.ಎಂ.ಎಫ್ ನಿಂದ ಪಡೆದ ಸಾಲ ೩೧,೫೨೮.೦ ಕೋಟಿ.

ಭಾರತ ಸರ್ಕಾರ ಮಾಡಿರುವ ಸಾಲದಲ್ಲಿ ಕಡಿಮೆ ಕಾಲಾವಧಿಯ ಅಲ್ಪ ಕಾಲಿಕ ಸಾಲದ ಪ್ರಮಾಣ ಕಡಿಮೆ ಇದ್ದರೂ, ದೀರ್ಘಕಾಲದ ಸಾಲದ ಪ್ರಮಾಣ, ೩೫,೪೪೨೧ ಕೋಟಿ ಇದೆ. ಇದಕ್ಕೆ ನಾವು ಪಾವತಿಸುತ್ತಿರುವ ಬಡ್ಡಿಯಪ್ರಮಾಣ, ವರ್ಷಕ್ಕೆ, ೨.೭೫ ಲಕ್ಷ ಕೋಟಿ!. ಇದು ನಮ್ಮ ದೇಶದ ಒಟ್ಟು ಆದಾಯದಲ್ಲಿ ಶೇ. ೧೮.೪೫ ಪ್ರಮಾಣವಾಗಿದೆ. ಇದನ್ನು ಪಾವತಿಸಲು ಸಾಲಗಾರರು ಸಾಕಷ್ಟು

ಕಾಲಾವಕಾಶ ಕೊಟ್ಟರೂ ನಾವು ತಾತ್ಸಾರ ಹೊಂದಿದರೇ, ಮುಂದಿನ ಪೀಳಿಗೆ ಅದನ್ನು ಬಡ್ಡಿ ಸಮೇತ ಪಾವತಿಸಬೇಕಾಗುತ್ತದೆ. ಆಗ ನಮಗೆ ಸಾಲವನ್ನು ಬಿಟ್ಟು ಹೋದ ನಮ್ಮ ಹಿರಿಯರನ್ನು ನಾವು ಶಪಿಸುವಂತೆ, ಮುಂದೊಂದು ದಿನ ನಮ್ಮ ಪರಿಸ್ಥಿತಿಯಾಗಿರುತ್ತದೆ. ೨೦೧೧ರ ಅಂಕಿಅಂಶಗಳ ಪ್ರಕಾರ, ಪ್ರಪಂಚದ ಸಾಲಗಾರ ದೇಶಗಳ ಸಾಲಿನಲ್ಲಿ ದೇಶದ ಒಟ್ಟು ಜಿ.ಡಿ.ಪಿ ಯ ೫೫.೯% ಸಾಲ ಹೊಂದಿ ಭಾರತ ೪೪ನೇ ಸ್ಥಾನದಲ್ಲಿದೆ.

ಸರ್ಕಾರ ತನ್ನ ತೆರಿಗೆ ಮತ್ತಿತರ ಮೂಲಗಳಿಂದ ಸಂಗ್ರಹಿಸಿದ ಸಂಪನ್ಮೂಲಗಳಿಂದ ಸರ್ಕಾರದ ಖರ್ಚನ್ನು ನಿಭಾಯಿಸಲು ಸಾಧ್ಯವಾಗದಿದಾಗ ಸಾಲ ಮಾಡಲು ಮುಂದಾಗುತ್ತದೆ. ಅಂದರೇ, ಸರ್ಕಾರ ಮಾಡಿರುವ ಸಾಲ ನಮಗಾಗಿಯೇ. ನಾವು ಓಡಾಡುವ ರಸ್ತೆ, ಸೇತುವೆ, ನಮ್ಮೂರಿನ ಕೆರೆ, ನಾವು ಪಡಿತರ ಚೀಟಿಯಲ್ಲಿ ತರುವ ಅಕ್ಕಿ, ಅದನ್ನು ಬೇಯಿಸಲು ಬಳಸುವ ಎಲ್.ಪಿ.ಜಿ, ಸೀಮೆಎಣ್ಣೆ, ನಾವು ಓಡಾಡುವ ವಾಹನಕ್ಕೆ ಬೇಕಾಗುವ ಡೀಸಲ್, ಪೆಟ್ರೋಲ್, ಬಳಸುವ ವಿದ್ಯುತ್, ನಮ್ಮ ಬೆಳೆಗಳಿಗೆ ನೀರುಣಿಸುವ ಅಣೆಕಟ್ಟು, ಕಾಲುವೆಗಳ ನಿರ್ಮಾಣಕ್ಕೆ, ರಸಗೊಬ್ಬರಗಳ ಸಬ್ಸಿಡಿಗಳಿಗೆ, ನಮ್ಮನ್ನು ಹಗಲಿರುಳು ಕಾಯುವ ಸೈನ್ಯಕ್ಕೆ, ಅದಕ್ಕೆ ಬೇಕಾಗುವ ಮದ್ದು ಗುಂಡು, ತತ್ರಜ್ಞಾನಕ್ಕೆ. ಇವೆಲ್ಲವುಗಳ ನಿರ್ವಹಿಸುವ ಸರ್ಕಾರಿ ನೌಕರರಿಗೆ ಒಟ್ಟಾರೆ, ನಮ್ಮ ಸರ್ಕಾರ ಸಾಲ ಮಾಡುತ್ತಿರುವುದು ಮೂರು ಉದ್ದೇಶಗಳಿಗಾಗಿ:

೧. ವಿವಿಧ ಸಾರ್ವಜನಿಕ ವೆಚ್ಚಗಳಿಗೆ ಸಂಬಂದಿಸಿದಂತೆ ಸಬ್ಸಿಡಿನೀಡುವ ಉದ್ದೇಶದಿಂದ;

೨. ರಕ್ಷಣಾವಲಯಕ್ಕೆ ಸಂಬಂದಿಸಿದಂತೆ ತಂತ್ರಜ್ಞಾನಕ್ಕೆ, ಮದ್ದು ಗುಂಡುಗಳ ಖರೀದಿಗೆ; ಮತ್ತು

೩. ಪ್ರತೀವರ್ಷ ಉಂಟಾಗುವ ಕೊರತೆ ಬಜೆಟ್ ನ್ನು ಸರಿದೂಗಿಸಲು.

ನಮ್ಮದು 'ಕಲ್ಯಾಣ ರಾಜ್ಯ'ವಾದ್ದರಿಂದ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ದೊರಕಿಸುವ ನಿಟ್ಟಿನಲ್ಲಿ ಸರ್ಕಾರ ಕೊಡಮಾಡುವ ಸಬ್ಸಿಡಿ, ಸಾಲದ ಸಿಂಹಪಾಲನ್ನು ಪಡೆಯುತ್ತದೆ. 'ರಾಸಾಯನಿಕ ಗೊಬ್ಬರ ಇಲಾಖೆ'ಯ ಅಂಕಿ ಅಂಶಗಳಂತೆ ಭಾರತ ಸರ್ಕಾರವು ೨೦೧೦-೧೧ ಸಾಲಿನಲ್ಲಿ ಕೊಡಮಾಡಿದ ಸಬ್ಸಿಡಿ ಪ್ರಮಾಣ ೮೪,೮೪೪ ಕೋಟಿ. ಅಂದಾಜಿನಂತೆ ೨೦೧೬-೧೭ ರಲ್ಲಿ ಅದರ ಪ್ರಮಾಣ ೧,೩೪,೮೦೫ ಕೋಟಿಯಷ್ಟಿರುತ್ತದೆ. ಮತ್ತೊಂದು ಪ್ರಮುಖ ಸಾಲದ ಹೊಂಡವಾದ ಪೆಟ್ರೋಲಿಯಂ ಉತ್ಪನ್ನಗಳಿಗೆ ಭಾರತ ಸರ್ಕಾರ ೨೦೧೦ ರಲ್ಲಿ ನೀಡಿದ ಸಬ್ಸಿಡಿ ಹಣ ೪೧,೦೦೦ ಕೋಟಿಗಳು. ಇದರ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ.

ದುರಂತವೆಂದರೆ, ಇಲ್ಲಸಲ್ಲದನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸುವ ರಾಜಕೀಯ ಪಕ್ಷಗಳು, ದೇಶ ಇತರೆಡೆಯಲ್ಲಿ ಮಾಡಿರುವ ಸಾಲ ಹಿಂದಿರುಗಿಸಿ, ಋಣ ಮುಕ್ತ ಭಾರತವನ್ನು ರೂಪಿಸುತ್ತೇವೆಂಬ ಮುಖ್ಯವಾದ ಅಂಶವನ್ನು ಸೇರಿಸಿಯೇ ಇಲ್ಲ. ಇದು ನಮ್ಮ ನಾಯಕರುಗಳಿಗೆ ಇರುವ ಸೂಕ್ಷ್ಮತೆಗೆ, ದೂರದೃಷ್ಟಿಗೆ, ದೇಶದೆಡೆಗೆ ಹೊಂದಿರುವ ಉದಾಸೀನತೆಗೆ ಕನ್ನಡಿ.

ಅದೊಮ್ಮೆ ಜವಹರಲಾಲ್ ನೆಹರೂ ತಮ್ಮ ವಿಶಾಲ ಬಂಗಲೆಯಲ್ಲಿ ಕುಳಿತು

ಏನನ್ನೋ ಯೋಚಿಸುತ್ತಿದ್ದರು. ತನ್ನ ಸೇವಕನೊಬ್ಬ ಒಳ ಬಂದು ತಮ್ಮನ್ನು ಕಾಣಲು ಜೆ.ಪಿ ಯವರು ಬಂದಿದ್ದಾರೆಂದು ಹೇಳಿದ. ನೆಹರೂರವರು ಉತ್ಸಾಹಭರಿತರಾಗಿ ಸ್ವಾಗತಿಸಲು ಹೊರಬಂದರು. ಉಭಯಕುಶಲೋಪರಿಯೆಲ್ಲಾ ಮುಗಿದನಂತರ ಚರ್ಚೆಯು ರಾಷ್ಟ್ರನಿರ್ಮಾಣದ ಕಡೆ ಹೊರಳಿತು. ತದನಂತರ ವಿಷಯ ವೈಯುಕ್ತಿಕ ವಿಚಾರಗಳ ಕಡೆ ತಿರುಗಿತು.

'ನೆಹರೂ, ನಿಮ್ಮ ಆತ್ಮಚರಿತ್ರೆ ' ಡಿಸ್ಕವರಿ ಆಫ್ ಇಂಡಿಯಾ' ಕೃತಿಯನ್ನು ಓದಿದೆ. ನಿಜಕ್ಕೂ ಅದು ಅಮೂಲ್ಯ ಕೃತಿ. ನನಗೆ ಅದರಲ್ಲಿ ಹೆಚ್ಚು ಇಷ್ಟವಾದ ಭಾಗವೆಂದರೇ, ತಾವು ರಷ್ಯಾದ ಸರ್ವಾಧಿಕಾರಿ 'ಲೆನಿನ್'ರವರ ಬಗ್ಗೆ ಬರೆದಿರುವುದು. ಅವರು ಇಡೀ ರಷ್ಯಾಕ್ಕೆ ಮುಖ್ಯಸ್ಥರಾಗಿ, ಒಂದು ಚಿಕ್ಕ ಕೊಠಡಿಯಲ್ಲಿ ವಾಸಿಸುತ್ತಿದ್ದ ವಿಚಾರ ಬರೆದಿದ್ದೀರ. ಆತನ ಸರಳತೆ ನನಗೆ ತುಂಬಾ ಇಷ್ಟವಾಯಿತು. ತಮಗೂ ಅದು ಒಪ್ಪಿಗೆಯಾಗಿದೆ ಎಂದು ಬಾವಿಸಿದ್ದೇನೆ.' ಎಂದಾಗ, ನೆಹರೂರವರು 'ಹೌದು' ಎಂಬಂತೆ ತಲೆದೂಗಿದರು. ಮುಂದುವರೆದ ಜೆ.ಪಿ, 'ತಾವು, ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ದೇಶಕ್ಕೆ ಪ್ರಧಾನಿಯಾಗಿದ್ದೀರ, ಇಷ್ಟು ದೊಡ್ಡ ಬಂಗಲೆಯಲ್ಲಿ ರಾಜವೈಭೋಗ ಅನುಭವಿಸುವುದಕ್ಕೆ ಬದಲು, ಅವರಂತೆ ಸರಳ ಜೀವನ ಏಕೆ ಮಾಡಬಾರದು?.' ಎಂದರು.

ನೆಹರೂರವರಿಗೆ ಒಂದು ಕ್ಷಣ ಗಲಿಬಿಲಿಯಾದರೂ ಸಾವರಿಸಿಕೊಂಡು, 'ಜೆ.ಪಿ, ನಮ್ಮದು ತಾವು ಹೇಳಿದಂತೆ, ಪ್ರಪಂಚದಲ್ಲೇ ಬೃಹತ್ ಪ್ರಜಾಪ್ರಭುತ್ವ ದೇಶ. ಇದರ ಪ್ರಧಾನಿಯಾಗಿ ನಾನು ಒಂದು ಚಿಕ್ಕ ಕೋಣೆಯಲ್ಲಿದ್ದರೆ, ನಮ್ಮ ದೇಶದ ಮರ್ಯಾದೆ ಏನಾಗಬೇಡ?. ದೇಶದ ಗೌರವ, ಘನತೆ ಕಾಪಾಡಬೇಕಾದ್ದು ಪ್ರಧಾನಿಯಾಗಿ ನನ್ನ ಕರ್ತವ್ಯವಲ್ಲವೇ?.'ಎಂದರು ನೆಹರು.

ಈ ಮಾತನ್ನು ಕೇಳಿಸಿಕೊಂಡ ಜೆ.ಪಿಯವರು ಶಾಂತರೀತಿಯಿಂದ, 'ಸರಿ, ನೆಹರೂಜೀ, ತಾವು ಹೇಳುತ್ತಿರುವುದು ನಿಜವೆಂದೇ ತಿಳಿಯೋಣ. ಆದರೆ, ಈ ವಿಚಾರದಲ್ಲಿ ದೇಶದ ಮರ್ಯಾದೆ ಬಗ್ಗೆ ಯೋಚಿಸುವ ತಾವು, ಜಗತ್ತಿನ ಚಿಕ್ಕ ದೇಶವಾದ ಹಾಲೆಂಡ್ ಮುಂದೆ ಭಿಕ್ಷಾಪಾತ್ರೆಯನ್ನು ಕೈಯಲಿ ಹಿಡಿದು ಸಾಲಕ್ಕಾಗಿ ಅವರ ಬಾಗಿಲಲ್ಲಿ ನಿಲ್ಲುತ್ತೀರಲ್ಲಾ, ಆವಾಗ ಎಲ್ಲೋಗಿರುತ್ತದೆ ಈ ಸ್ವಾಭಿಮಾನ, ಘನತೆ, ಗೌರವ...?'

ನೆಹರೂ ತಲೆತಗ್ಗಿಸಿ ನಿರುತ್ತರರಾದರು. ಸಾಲ ಮಾಡಿ ದೇಶವನ್ನು ಅತಂತ್ರ ಸ್ಥಿತಿಗೆ ಕೊಂಡೊಯ್ಯುತ್ತಿರುವ, ಆ ಮೂಲಕ ದೇಶದ ಘನತೆ, ಗೌರವವನ್ನು ಬೀದಿಪಾಲು ಮಾಡುತ್ತಿರುವ ನಮ್ಮ ರಾಜಕಾರಣಿಗಳನ್ನು ಈ ರೀತಿಯಲ್ಲಿ ಎಚ್ಚರಿಸುವ ಎದೆಗಾರಿಕೆ ಇರುವ ನಾಯಕರು ಬೇಕು. ಯಾರಿದ್ದಾರೆ?.

ದೇಶದಲ್ಲಿ ತುರ್ತಾಗಿ ಆಗಬೇಕಾಗಿರುವ ಕೆಲಸವೆಂದರೇ, ಈ ಸಾರ್ವಜನಿಕ ಸಾಲದ ಸಮಸ್ಯೆಯನ್ನು ನಿವಾರಿಸಬೇಕಾಗಿದೆ. ಇದನ್ನು ಮುಖ್ಯವಾಗಿ ಮೂರು ಹಂತಗಳಲ್ಲಿ ಸಾದಿಸಬಹುದು. ಅವುಗಳೆಂದರೆ:

೧. ಸರ್ಕಾರವು ಹೊಸದಾಗಿ ಮಾಡುವ ಸಾಲವನ್ನು ನಿಲ್ಲಿಸಬೇಕು;

೨. ಸರ್ಕಾರಕ್ಕೆ ಬರುವ ಆದಾಯವನ್ನು ಉತ್ಪಾದನಾಶಗಳಿಗೆ ಬಳಸಿ,

ಆದಾಯದ ಪ್ರಮಾಣವನ್ನು ಹೆಚ್ಚಿಸಬೇಕು; ಮತ್ತು

೩. ಸರ್ಕಾರದ ಖರ್ಚನ್ನು ಕಡಿತಗೊಳಿಸಬೇಕು.

ಸರ್ಕಾರ ಹಲವು ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

* ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ತರುವುದರ ಜೊತೆಗೆ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಸಾಧ್ಯವಿರುವಲ್ಲಿ ಉಳಿತಾಯದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

* ಯಾವುದೇ ಹೊಸ ಸಾಲ ಪಡೆಯುವ ಮೊದಲು ಸರ್ಕಾರ ಸಾರ್ವಜನಿಕರ ಅಭಿಪ್ರಾಯ ಪಡೆಯಬೇಕು.

* ಸರ್ಕಾರವು ಆದಾಯ ಸೋರಿಕೆಯನ್ನು ಸೊನ್ನೆಯಾಗಿಸಬೇಕು.

* ಮುಖ್ಯವಾಗಿ ಸರ್ಕಾರದ ವೆಚ್ಚವನ್ನು ಕಡಿತಗೊಳಿಸುವಲ್ಲಿ ಆರ್ಥಿಕ ತಜ್ಞ ಆರ್.ಜೆ ಚೆಲ್ಲಯ್ಯರು ನೀಡಿದ ಸುಧಾರಣಾ ಕ್ರಮಗಳನ್ನು ಪಾಲಿಸಬೇಕು. ಅವುಗಳೆಂದರೆ:

– ಸರ್ಕಾರವು ತನ್ನ ಸಿಬ್ಬಂದಿಗಾಗಿ ಮಾಡುವ ಖರ್ಚನ್ನು ಕಡಿತಗೊಳಿಸಬೇಕು.

– ಸಬ್ಸಿಡಿಗಳಿಗೆ ಕಡಿವಾಣ ಹಾಕಬೇಕು.

– ಬಂಡವಾಳದ ನೆರವನ್ನು ಕಡಿಮೆಮಾಡಬೇಕು.

– ದೇಶದ ಹೊರಗೆ ಇರುವ ಕಪ್ಪು ಹಣವನ್ನು ಸೂಕ್ತ ಕಾನೂನುಗಳ ಮೂಲಕ ದೇಶಕ್ಕೆ ತಂದು ಸಾಲವನ್ನು ಹಿಂದುರಿಗಿಸಲು ಕ್ರಮ ಕೈಗೊಳ್ಳಬೇಕು.

– ಸರ್ಕಾರ ಮುಂದಿನ ೫ ವರ್ಷಗಳಲ್ಲಿ ಯಾವುದೇ ಹೊಸ ಸಾಲವನ್ನು(ಅನಿವಾರ್ಯ ಕಾರಣಗಳನ್ನು ಹೊರತುಪಡಿಸಿ) ಮಾಡುವುದಿಲ್ಲವೆಂಬ ಶಪತ ಕೈಗೊಂಡು ಪಾಲಿಸುವುದು.

– ಜನರಲ್ಲಿ ಉಳಿತಾಯದ ಮನೋಭಾವವನ್ನು ಹೆಚ್ಚಿಸಿ, ಉಳಿಸಿದ ಹಣದಿಂದ ಸಾರ್ವಜನಿಕ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಿ ಲಾಭದ ಉದ್ದಿಮೆಗಳನ್ನಾಗಿಸುವುದು.

– ಪರ್ಯಾಯ ಶಕ್ತಿ ಮೂಲಗಳ ಬಗ್ಗೆ ಹೆಚ್ಚು ಕಾಳಜಿ ವಹಿಸಿ, ಸಂಶೋಧನೆಗಳನ್ನು ಕೈಗೊಂಡು ದೇಶದಲ್ಲಿ ಶಕ್ತಿ ಭದ್ರತೆಯನ್ನು ತರುವುದು.

– ಸರ್ಕಾರವು ಸ್ವದೇಶಿ ಕಲ್ಪನೆಯನ್ನು ಸಮಾಜದಲ್ಲಿ ಬೆಳೆಸಿ, ಸಣ್ಣ ಮತ್ತು ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸಿ, ಬೆಳೆಸುವುದರಿಂದ ಜನರ ಉಳಿತಾಯ ಪ್ರಮಾಣ ಹೆಚ್ಚುವುದರ ಜೊತೆಗೆ, ಹೂಡಿಕೆಯೂ ಹೆಚ್ಚಿ, ದೇಶ ಪ್ರಗತಿಯೆಡೆಗೆ ಸಾಗುತ್ತದೆ.

* ಜನಸಾಮಾನ್ಯರು ಕೈಗೊಳ್ಳಬೇಕಾದ ಕ್ರಮಗಳು:

– ಕೃಷಿಕರು ತಮ್ಮ ಹೊಲಗದ್ದೆಗಳಿಗೆ ರಾಸಾಯನಿಕ ಮತ್ತು ಕೀಟನಾಶಕಗಳನ್ನು ಬಳಸದೇ, ಪಾರಂಪರಿಕವಾಗಿ ಬಂದಿರುವ ಸಾವಯವ ಕೃಷಿಯನ್ನು ಕೈಗೊಂಡು ಸ್ವಾವಲಂಬಿಗಳಾಗುವುದು.

– ಶತಮಾನಗಳಿಂದ ಬಳುವಳಿಯಾಗಿ ಬಂದಿರುವ 'ಶ್ರಮದಾನ'

ಪದ್ಧತಿಯಿಂದ ತಮ್ಮ ಊರಿನ ಕೆರೆ, ಕಾಲುವೆಗಳನ್ನು ಸಂರಕ್ಷಣೆ ಮಾಡಿಕೊಂಡರೆ, ಕೆರೆ ಹೂಳೆತ್ತುವ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ವಿದೇಶಿ ಸಂಸ್ಥೆಗಳಿಂದ ಸಾಲ ತರುವುದು ತಪ್ಪುತ್ತದೆ.

– ಜನರು ಪ್ರತಿಯೊಂದಕ್ಕೂ ಸರ್ಕಾರದ ಕಡೆ ಕೈತೋರಿಸುವುದು, ಕೈ ಚಾಚುವುದು ಬಿಡಬೇಕು. ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಅವಶ್ಯಕತೆಯಿರುವವರಿಗೆ ಬಿಟ್ಟುಕೊಡಬೇಕು. ಶಕ್ತರು ಸಬ್ಸಿಡಿಗಳನ್ನು ಪಡೆಯಬಾರದು.

– ನಾಗರೀಕ ಸಮಾಜವು ಈ ಗಂಭೀರ ವಿಚಾರದ ಬಗ್ಗೆ ಸಂಬಂಧಿಸಿದವರ ಗಮನ ಸೆಳೆದು ಹೊಸ ಸಾಲಕ್ಕೆ ಬೇಡಿಕೆ ಇಡದಂತೆ ನೋಡಿಕೊಳ್ಳಬೇಕು.

– ಜನರು ಕೊಳ್ಳುಬಾಕ ಸಂಸ್ಕೃತಿಗೆ ಮಾರುಹೋಗದೇ, ಅನಗತ್ಯ ಖರ್ಚನ್ನು ಕಡಿತಗೊಳಿಸುವುದು ಅಗತ್ಯ.

ಈ ಸಂದರ್ಭದಲ್ಲಿ ನಮಗೆ ಹಲವು ಪ್ರಶ್ನೆಗಳು ಮೂಡುವುದು ಸಹಜ. ಅಷ್ಟೊಂದು ಕೋಟಿ ಸಾಲ ಮಾಡಿದ ಸರ್ಕಾರಕ್ಕೆ ಎಂದೂ ಸಾಲ ಅತಿಯಾಯಿತು ಎನಿಸಲಿಲ್ಲವೇ? ಇದನ್ನು ಹಿಂದಿರುಗಿಸುವುದು ಹೇಗೆ ಎಂಬ ಪ್ರಶ್ನೆ ಹುಟ್ಟಲಿಲ್ಲವೇ? ಇಷ್ಟೆಲ್ಲಾ ಸಾಲಮಾಡಿದರೂ ನಮ್ಮಲ್ಲಿ ಬಡವರ ಪ್ರಮಾಣ ಕಡಿಮೆಯಾಗಿ, ಅವರ ಜೀವನ ಮಟ್ಟದ ಪ್ರಮಾಣ ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚಾಗಲಿಲ್ಲ ಏಕೆ? ಕನಿಷ್ಟ ಎಲ್ಲರಿಗೂ ಶುದ್ಧ ಕುಡಿಯುವ ನೀರನ್ನು ಎಲ್ಲರಿಗೂ ದೊರಕಿಸಲಾಗಲಿಲ್ಲವಲ್ಲಾ?. ಮುಂದೊಂದು ದಿನ ಸಾಲಕೊಟ್ಟವರ ಕೈ ಗೊಂಬೆಯಾಗುತ್ತೇವೆಂಬ ಕನಿಷ್ಟ ಅಂದಾಜೂ ಇಲ್ಲದಂತೆ ಸಾಲ ಮಾಡುತ್ತಿರುವುದರ ಹಿಂದಿರುವ ಉದ್ದೇಶವಾದರೂ ಏನು?. ಸಾಲ ಪಡೆಯುತ್ತಿರುವ ಎಲ್ಲಾ ಹಣವೂ ಅಭಿವೃದ್ಧಿಗೋಸ್ಕರ ಖರ್ಚಾಗುತ್ತಿದೆಯೇ? ಇಷ್ಟಕ್ಕೂ ಸಾಲ ಮಾಡಿ ಅಭಿವೃದ್ಧಿ ಮಾಡುತ್ತೇವೆಂಬ ಹುಂಬತನವೇಕೆ? ಇವೆಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಿದೆ.

ನಿಜವಾದ ದೇಶಭಕ್ತಿಯೆಂದರೆ, ವರ್ಷಕ್ಕೆ ಒಂದೆರಡು ಬಾರಿ ಬಾವುಟ ಹಾರಿಸಿ, ಜೈ ಕಾರವೆಂದು, ಚಪ್ಪಾಳೆ ತಟ್ಟುವುದಲ್ಲ. ದೇಶವನ್ನು ಋಣ ಮುಕ್ತಗೊಳಿಸಿ, ನಮ್ಮ ಮುಂದಿನ ಪೀಳಿಗೆ ಮತ್ತೊಂದು ದೇಶದ ಮುಂದೆ ತಲೆತಗ್ಗಿಸದಂತೆ ನೋಡಿಕೊಳ್ಳುವುದೇ ಆಗಿದೆ. ಹಿಂದೆ ಪಾಶ್ಚಿಮಾತ್ಯರು ವ್ಯಾಪಾರದ ಮೂಲಕ ದೇಶ ಪ್ರವೇಶಿಸಿ, ಇಡೀ ದೇಶವನ್ನೇ ಆಕ್ರಮಿಸಿಕೊಂಡು ನಮ್ಮ ದೇಶವನ್ನು ಕೊಳ್ಳೆಹೊಡೆದರು. ಈಗ ನಮಗೆ ಸಾಲದ ರುಚಿ ತೋರಿಸಿ ಮೈ ತುಂಬಾ ಸಾಲ ಹೊರೆಸಿ, ದೇಶದಲ್ಲಿರುವ ಸಂಪನ್ಮೂಲಗಳನ್ನು ದೋಚುತ್ತಿದ್ದಾರೆ. ಮುಂದೊಂದು ದಿನ ಇಡೀ ಭಾರತವನ್ನೇ ತಮ್ಮ ಸುಪರ್ದಿಗೆಗೆ ತೆಗೆದುಕೊಂಡು ನಮಗೆಲ್ಲಾ ವಿದೇಶೀ ಆಳ್ವಿಕೆಯ ರುಚಿ ತೋರಿಸಿದರೆ ಆಶ್ಚರ್ಯ ಪಡಬೇಕಿಲ್ಲ.

ಒಟ್ಟಾರೆ, ಸಾಲಕ್ಕೆ ಸಂಬಂದಿಸಿದಂತೆ ಜನರ, ಸರ್ಕಾರದ ಮನೋಭಾವ ಬದಲಾಗಬೇಕು. ಗಾಂಧೀಜಿಯವರ 'ಸರಳತೆ' ಜೀವನದ ಪ್ರತಿಹಂತದಲ್ಲೂ ಅಳವಡಿಸಿಕೊಳ್ಳಬೇಕು. ದುರಾಸೆ ದೂರಾಗಬೇಕು. ನಮ್ಮ ಹಿರಿಯರ ಸ್ವಾವಲಂಭಿ ಜೀವನ ಎಲ್ಲರಿಗೂ ಮಾದರಿಯಾಗಬೇಕು. ಇದಕ್ಕೆ ಸರ್ಕಾರಕ್ಕೆ ದೂರದೃಷ್ಟಿ ಉಳ್ಳ ನಾಯಕರ ಅಗತ್ಯ ತುಂಬಾ ಇದೆ. ಜವಾಬ್ದಾರಿಯುಳ್ಳ ನಾಗರೀಕರು ಕೂಡ.!

ಅಭಿವೃದ್ಧಿಯ ಆತಂಕಗಳು

- ಡಾ|| ಎನ್.ಜಗದೀಶ್ ಕೊಪ್ಪ

ನಾವು ಬದಕುತ್ತಿರುವ ಈ ಜಗತ್ತಿನಲ್ಲಿ ಎಲ್ಲಾ ತಂತ್ರಜ್ಞಾನಗಳು ಮನುಷ್ಯನ ಬೆರಳತುದಿಗೆ ಬಂದು ಕುಳಿತಿರುವಾಗ, ತಾನು ಕುಳಿತ ಸ್ಥಳದಿಂದ ವಿಶ್ವದರ್ಶನ ಮಾಡುತ್ತಿರುವ ನಾಗರಿಕನಿಗೆ ಮಾಧ್ಯಮದಲ್ಲಿ ಪ್ರಸಾರವಾಗುವ ಇಲ್ಲವೇ ಮುದ್ರಣವಾಗುವ ಎಲ್ಲಾ ಅಂಶಗಳು ಸತ್ಯ ಎಂಬ ಭ್ರಮೆ ಆವರಿಸಿಕೊಳ್ಳತೊಡಗಿದೆ.

ತಾನು ಹುಟ್ಟಿದ ನೆಲದ ಸಂಸ್ಕೃತಿಗೆ ಪೂರಕವಾಗಿ, ಪರಿಸರಕ್ಕೆ ಎರವಾಗದಂತೆ ಬದುಕಿದ್ದ ನಮ್ಮ ಪೂರ್ವಿಕರ ಜ್ಞಾನ ಪರಂಪರೆ ನಾಶವಾಗಿ ಪ್ರಕೃತಿಯ ಕೊಡುಗೆಗಳಾದ ನೆಲ, ಜಲ, ವಾಯು ಎಲ್ಲವೂ ಮನುಷ್ಯನ ಅನುಭೋಗಕ್ಕೆ ಮೀಸಲಾದ ಪುಕ್ಕಟೆ ಕೊಡುಗೆಗಳು ಎಂಬ ಅಹಂಕಾರ ಅರಿವಿಲ್ಲದೆ ಇತ್ತೀಚಿಗಿನ ದಿನಗಳಲ್ಲಿ ಮನುಷ್ಯನನ್ನು ಆವರಿಸಿಕೊಳ್ಳತೊಡಗಿದೆ. ಈ ಕಾರಣಕ್ಕಾಗಿ ಪರಿಸರವೇ ಕಲುಷಿತಗೊಂಡು, ಎಲ್ಲವೂ ಸರಕಿನಂತೆ ಮಾರಾಟವಾಗುತ್ತಿವೆ. ಆಧುನಿಕ ಜಗತ್ತಿನಲ್ಲಿ ಬೆಲೆಪಟ್ಟಿ ಧರಿಸಿಕೊಂಡಿರುವ ಒಂದು ಲೀಟರ್ ಹಾಲಿಗೂ, ನೀರಿಗೂ ಇದ್ದ ಮೌಲ್ಯದ ವ್ಯತ್ಯಾಸ ನಿಧಾನವಾಗಿ ಅಳಿಸಿಹೋಗುತ್ತಿದೆ.

ಒಂದು ಶತಮಾನದ ಹಿಂದೆ ಯಾವುದೇ ಒಂದು ಪ್ರದೇಶದ ಮೇಲೆ ಅಥವಾ ಒಂದು ದೇಶದ ಮೇಲೆ ಹಿಡಿತ ಸಾಧಿಸಲು ಯುದ್ಧ ಅನಿವಾರ್ಯವಾಗಿತ್ತು. ಆದರೆ, ಈಗಿನ ಪಾಶ್ಚಿಮಾತ್ಯ ಜಗತ್ತು ಯುದ್ಧವಿಲ್ಲದ ಯಂತ್ರೋಪಾಯಗಳನ್ನು ಕಂಡುಕೊಂಡಿದೆ. ಇಲ್ಲಿ ಯುದ್ಧ ವಿಮಾನಗಳಗಲಿ, ಸೈನಿಕರಾಗಲಿ, ಬಾಂಬ್‌ಗಳಾಗಲಿ ಅವಶ್ಯಕತೆಯಿಲ್ಲ. ಗುರಿಯಿಟ್ಟುಕೊಂಡಿರುವ ಪ್ರದೇಶದ ಜನರ ಅಭಿರುಚಿ ಮತ್ತು ಆಹಾರ ಸಂಸ್ಕೃತಿಯನ್ನು ಬದಲಿಸಿದರೆ ಸಾಕು ಇಡೀ ಪ್ರದೇಶದ ಜನರನ್ನು ಒಳಗೊಂಡು ದೇಶವೇ ಶರಣಾಗುವ ಸ್ಥಿತಿ ಬಂದಿದೆ. ಈ ಕುಟಿಲ ತಂತ್ರೋಪಾಯಗಳಿಗೆ ಬೇಕಾಗಿರುವುದು ಕೇವಲ ಮಾಧ್ಯಮಗಳು ಮಾತ್ರ. ಜಾಹೀರಾತಿನ ಪ್ರಲೋಭನೆ ಮುಖಾಂತರ ಜೀವನಶೈಲಿಯನ್ನು, ಜನರ ಸಂಸ್ಕೃತಿಯನ್ನು ಬದಲಾಯಿಸಬಹುದು ಎಂಬುದನ್ನು ಜಾಗತೀಕರಣ ವ್ಯವಸ್ಥೆ ಆಧುನಿಕ ಜಗತ್ತಿಗೆ ಮನವರಿಕೆ ಮಾಡಿಕೊಟ್ಟಿದೆ. ಈ ಕಾರಣಕ್ಕಾಗಿ ನಮ್ಮ ಬರಗೂರು ರಾಮಚಂದ್ರಪ್ಪ ಜಾಗತೀಕರಣವನ್ನು "ಶಬ್ದವಿಲ್ಲದ ನಿಶ್ಯಬ್ದ ಯುದ್ಧ" ಎಂದು ಅರ್ಥಪೂರ್ಣವಾಗಿ ಕರೆದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ವರ್ತಮಾನ ಜಗತ್ತಿನ ಆಹಾರ, ಉಡುಪು, ನಾವು ಕೇಳುವ ಸಂಗೀತ, ನೋಡುವ ಸಿನೆಮಾ, ಯುವ ತಲೆಮಾರಿನ ಚಿಂತನೆಯ ಮಾದರಿಗಳು ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ನಮ್ಮ ಅಭಿವೃದ್ಧಿಯ ಪಥ ಯಾವ ದಿಕ್ಕಿನತ್ತ ಚಲಿಸುತ್ತಿದೆ ಎಂಬುದನ್ನು ಗ್ರಹಿಸಬಹುದು.

ಬಹುಮುಖಿ ಸಂಸ್ಕೃತಿಯ ನೆಲವಾದ ಭಾರತದ ವೈವಿಧ್ಯತೆಯ ಭಾಷೆ ಧರ್ಮ, ಆಚಾರ ವಿಚಾರಗಳ, ಜಾತಿ, ಇವುಗಳ ನಡುವೆಯೂ ಒಂದು ಉದಾತ್ತ

ಸಂಸ್ಕೃತಿಯೊಂದು ಬೆಳೆದು ಬಂದಿತ್ತು. ಪರಧರ್ಮ, ಜಾತಿ ಸಹಿಷ್ಣು ಮನೋಭಾವ ಮತ್ತು ಈ ಉದಾತ್ತ ಮನೋಭಾವ ಸಂಸ್ಕೃತಿಯ ಜೀವಾಳವಾಗಿತ್ತು. ನಮ್ಮ ಪೂರ್ವಿಕರ ದೇಶೀ ಜ್ಞಾನ ಪರಂಪರೆ, ಅದರ ಕೊಡುಗೆಗಳಾದ ಯೋಗ, ಧ್ಯಾನ, ಆಯುರ್ವೇದ ಔಷಧ ಪದ್ಧತಿ, ನಮ್ಮ ಸಾಕು ಪ್ರಾಣಿಗಳಾದ ಜಾನುವಾರುಗಳಿಗೆ ನೀಡುತ್ತಿದ್ದ ಗಿಡಮೂಲಿಕೆಗಳ ಔಷಧಗಳು, ಹವಾಮಾನಕ್ಕೆ ಅನುಗುಣವಾಗಿ ಬದಲಾಗುತ್ತಿದ್ದ ನಮ್ಮ ಆಹಾರ ಪದ್ಧತಿ ಇವೆಲ್ಲವೂ ಆಧುನಿಕತೆಯ ಅಭಿವೃದ್ಧಿಯ ರಥದ ಗಾಲಿಯಡಿ ಸಿಲುಕಿ ನುಚ್ಚು ನೂರಾಗಿವೆ. ನಮ್ಮ ಬಹು ಸಂಸ್ಕೃತಿ ನಮ್ಮೆಲ್ಲರ ಅರಿವಿಗೆ ಬಾರದಂತೆ ಏಕಮುಖ ಸಂಸ್ಕೃತಿಯತ್ತ ಜಾರಿದೆ. ಇದು ಮರೆಯಲ್ಲಿ ಕುಳಿತು ಮಾರುಕಟ್ಟೆಯ ಪ್ರಭುತ್ವದ ಸೂತ್ರ ಹಿಡಿದಿರುವ ವ್ಯವಸ್ಥೆಯೊಂದರ ಕಾಣದ ಕೈವಾಡ ಎಂದು ಅರ್ಥೈಸಿಕೊಳ್ಳಲಾರದ ವಿಸ್ಮೃತಿಗೆ ನಾವು ತಳ್ಳಲ್ಪಟ್ಟಿದ್ದೇವೆ.

ಅನ್ನ ತಿನ್ನುವ ಬಾಯಿಗೆ ನೂಡಲ್ಸ್ ಮತ್ತು ಪಿಜ್ಜಾಗಳನ್ನು ತುರುಕಲಾಗುತ್ತಿದೆ. ಮಜ್ಜಿಗೆ, ಎಳನೀರು ಕುಡಿಯುತ್ತಿದ್ದ ಗಂಟಲಿಗೆ ಪೆಪ್ಸಿ, ಕೊಕೊಕೋಲಾ ಸುರಿಯಲಾಗುತ್ತಿದೆ, ಚಕ್ಕುಲಿ, ಕೋಡುಬಳೆ ಹಿಡಿಯುತ್ತಿದ್ದ ಕೈಗಳಿಗೆ ಲೇಸ್ ಮತ್ತು ಕುರ್ಕುರೆ ಚಿಪ್ಸ್ ಪ್ಯಾಕೆಟ್ ಹಾಗೂ ಕೆಂಟುಕಿ ಚಿಕನ್ ನೀಡಲಾಗಿದೆ. ಅರಿಶಿನ, ಶ್ರೀಗಂಧ ಬಳಿದುಕೊಳ್ಳುತ್ತಿದ್ದ ಮುಖಗಳಿಗೆ ಮಾರುಕಟ್ಟೆಯಲ್ಲಿರುವ ನೂರಾರು ಕ್ರೀಮ್‌ಗಳನ್ನು ಬಳಿಯಲಾಗುತ್ತಿದೆ. ಕೇವಲ ೧೫ ದಿನಗಳಲ್ಲಿ ಕಪ್ಪಗಿದ್ದವರನ್ನು ಬೆಳ್ಳಗೆ ಮಾಡುವ, ದಪ್ಪಗಿದ್ದವರನ್ನು ಸಣ್ಣಗೆ ಮಾಡುವ, ಬೋಳು ತಲೆಯಲ್ಲಿ ಸೊಂಪಾಗಿ ತಲೆಗೂದಲು ಬೆಳೆಸುವ ಇವಿಷ್ಟೇ ಅಲ್ಲದೆ ಇಡೀ ರಾತ್ರಿ ನಿಮ್ಮ ಸಂಗಾತಿಗೆ ನಿರಂತರ ಸುಖ ನೀಡುವ ಮಾತ್ರೆಗಳನ್ನು ರೂಪಿಸಲಾಗಿದೆ! ಇವುಗಳ ಖಚಿತತೆಯ ಬಗ್ಗೆ ಶೋಧನೆಯಾಗಲಿ, ವಿವೇಚನೆಯಾಗಲಿ ಇಲ್ಲದೆ, ಮಧ್ಯಮವರ್ಗದ ಗ್ರಾಹಕ ಜಗತ್ತು ಶರಣಾಗಿದೆ. ಈ ನಕಲಿ ಸಂಸ್ಕೃತಿಗೆ ನಮ್ಮ ಮಾಧ್ಯಮಗಳು ಏಜಂಟರಂತೆ ಕಾರ್ಯನಿರ್ವಹಿಸುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳ ಇಂತಹ ಪ್ರಲೋಭನೆಗಳು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬೇಕೇ ಎಂಬುದರ ಬಗ್ಗೆ ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ.

ನಾಲ್ಕು ಜನ ಉಳ್ಳವರ ನೆಮ್ಮದಿಯ ಬದುಕಿಗಾಗಿ ನಲವತ್ತು ಜನರ ನೆಮ್ಮದಿಯ ಬದುಕನ್ನು ಕಿತ್ತುಕೊಳ್ಳುವ ಇಂದಿನ ಅಭಿವೃದ್ಧಿ ಯೋಜನೆಗಳ ಬಗೆಗಿನ ಚಿಂತನೆಗಳನ್ನು ನಾವೀಗ ಪರಾಮರ್ಶಿಸಬೇಕಿದೆ.

ಅಭಿವೃದ್ಧಿಯ ಬಗ್ಗೆ ಪುಂಖಾನುಪುಂಖವಾಗಿ ವಿಚಾರಲಹರಿಯನ್ನು ಹರಿಯ ಬಿಡುವ ಜಾಗತಿಕರಣ ಅಥವಾ ಮಾರುಕಟ್ಟೆ ಪ್ರಭುತ್ವದ ವಕ್ತಾರರು, ಈ ದೇಶದಲ್ಲಿ ನಿವಾರಣೆಯಾಗದ ಬಡತನ, ಸುಧಾರಣೆಯಾಗದ ಆರೋಗ್ಯ ಕ್ಷೇತ್ರ, ದುಬಾರಿಯಾದ ಬಡವರ ಪಾಲಿನ ಜೀವರಕ್ಷಕ ಔಷಧಗಳು, ಮಧ್ಯಮವರ್ಗದ ಜನತೆಗೆ ನಿಲುಕದ ಉನ್ನತ ಶಿಕ್ಷಣ, ಮಕ್ಕಳ ಅಪೌಷ್ಟಿಕತೆ, ರೈತರ ದಾರುಣ ಆತ್ಮಹತ್ಯೆ, ಆದಿವಾಸಿಗಳ ಅತಂತ್ರ ಬದುಕು, ಕಲ್ಮಷವಾಗುತ್ತಿರುವ ನೀರಿನ ಮೂಲಗಳು, ಬತ್ತಿ ಹೋಗುತ್ತಿರುವ ನದಿಗಳು, ಪದೇ ಪದೇ ಕಿತ್ತು ಹೋಗಿ ರಿಪೇರಿಯಾಗುವ ರಾಷ್ಟ್ರೀಯ ಹೆದ್ದಾರಿಗಳು ಇವುಗಳ ಹಿಂದಿನ ಹುನ್ನಾರವೇನು? ಯಾರಾದರೂ ಅರ್ಥೈಸಿ ಹೇಳಬಲ್ಲರೇ? ಅಥವಾ ವಿಶ್ಲೇಷಿಸಬಲ್ಲರೇ?

ದಿನಕ್ಕೆ ೨೮ ರುಪಾಯಿ ದುಡಿಯಬಲ್ಲ ವ್ಯಕ್ತಿ ಬಡವನಲ್ಲ ಎಂದು ಈ ದೇಶದ ರಾಷ್ಟ್ರೀಯ ಆಯೋಗ ಘೋಷಣೆ ಮಾಡಿದೆ. ಬಡಬಲ್ಲಿದ ಎಂಬ ಭೇದಭಾವವಿಲ್ಲದೆ ನಾವು ತಿನ್ನುವ ಅಕ್ಕಿಯ ಬೆಲೆ ಕಿಲೋ ೧ಕ್ಕೆ ೩೬ ರುಪಾಯಿ, ಜೋಳ ೨೮ ರುಪಾಯಿ, ಗೋಧಿಯ ಬೆಲೆ ೨೬ ರುಪಾಯಿ ಇದ್ದು ಬೆಲೆಗಳು ದಿನೇ ದಿನೇ ಏರಿಕೆಯಾಗುತ್ತಲೇ ಇವೆ. ಇಂತಹ ದುಬಾರಿಯಾದ ಅಗತ್ಯವಸ್ತುಗಳ ಬೆಲೆ ಏರಿಕೆಯ ಪ್ರಪಂಚದಲ್ಲಿ ಬಡವರು ಹೇಗೆ ಬದುಕುಬೇಕು? ಇದಕ್ಕೆ ಯಾರಲ್ಲಿ ಉತ್ತರ ಪಡೆಯೋಣ?

ಯಾವುದೇ ಒಂದು ದೇಶದ ಅಭಿವೃದ್ಧಿಯನ್ನು ಆ ದೇಶದ ಜನರ ತಲಾ ವರಮಾನ ಅಥವಾ ಒಟ್ಟು ರಾಷ್ಟ್ರೀಯ ಉತ್ಪನ್ನಗಳ (ಜಿ.ಡಿ.ಪಿ) ಮಾನದಂಡದಿಂದ ಅಳೆದರಷ್ಟೇ ಸಾಲದು, ಅಲ್ಲಿನ ಜನರ ಬದುಕಿನ ಭೌತಿಕ ಸ್ಥಿತಿಗತಿಯನ್ನೂ ಕೂಡ ಪರಿಗಣನೆಗೆ ತೆಗೆದುಕೊಳ್ಳಬೇಕು ಎಂಬುದು ಇತ್ತೀಚಿಗಿನ ಆರ್ಥಿಕ ತಜ್ಞರ ವಾದವಾಗಿದೆ. ಇದಕ್ಕೆ ಚಾಲನೆ ನೀಡಿದರು ನಮ್ಮವರೇ ಆದ ನೋಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್. ವ್ಯಕ್ತಿಯೊಬ್ಬನ ಧಾರಣಾ ಸಾಮರ್ಥ್ಯ ಅಂದರೆ, ಆತನಿಗೆ ಸಿಗುತ್ತಿರುವ ಸಾಮಾಜಿಕ ಸೌಲಭ್ಯಗಳು, ಶಿಕ್ಷಣ, ಆರೋಗ್ಯ ಮುಂತಾದ ಸವಲತ್ತುಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಸೇನ್ ಒತ್ತಾಯಿಸಿದ್ದಾರೆ. ಕೇವಲ ಭೌತಿಕ ಸಂಪತ್ತು ನಿಜವಾದ ಮಾನದಂಡವಾಗಲಾರದು ಎಂಬುದು ಅವರ ನಿಲುವು. (ಈ ಕುರಿತಂತೆ ಅವರ "ದ ಐಡಿಯಾ ಆಫ್ ಜಸ್ಟೀಸ್" ಹಾಗೂ "ಡವೆಲಪ್‌ಮೆಂಟ್ ಅಂಡ್ ಫ್ರೀಡಂ" ಕೃತಿಯನ್ನು ಅವಲೋಕಿಸಬಹುದು) ಇದಕ್ಕಿಂತ ಭಿನ್ನವಾದ ಪರಿಕಲ್ಪನೆಯೊಂದನ್ನ ಭೂತಾನ್ ದೇಶದ ದೊರೆ ಹುಟ್ಟುಹಾಕಿದ್ದಾನೆ. ಅವನ ದೃಷ್ಟಿಯಲ್ಲಿ ರಾಷ್ಟ್ರವೊಂದರ ಜಿ.ಡಿ.ಪಿ (ಒಟ್ಟು ರಾಷ್ಟ್ರೀಯ ಉತ್ಪನ್ನ)ಗಿಂತ ರಾಷ್ಟ್ರದ ಜನರ ನೆಮ್ಮದಿ ಮುಖ್ಯ ಎಂಬುದು ಭೂತಾನ್ ದೊರೆಯ ಅಭಿಮತ.

ಅಮರ್ತ್ಯಸೇನ್ ಸಿದ್ಧಾಂತವನ್ನು ನಾವು ಪರಿಗಣಿಸುವುದಾದರೆ, ನಾವು ಭಾರತವನ್ನು ಅಭಿವೃದ್ಧಿಶೀಲ ರಾಷ್ಟ್ರವೆಂದು ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ, ಇಲ್ಲಿನ ೧೨೦ ಕೋಟಿ ಜನಸಂಖ್ಯೆಯಲ್ಲಿ ಶೇ.೭೦ರಷ್ಟು ಜನತೆ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಇವರಲ್ಲಿ ಬಹುತೇಕ ಮಂದಿ ಆರೋಗ್ಯ ಮತ್ತು ಉನ್ನತಶಿಕ್ಷಣ, ಮುಂತಾದ ಸವಲತ್ತುಗಳಿಂದ ವಂಚಿತರಾಗಿದ್ದಾರೆ.

ಇದು ಈ ದೇಶದ ವೈರುಧ್ಯವೋ ಅಥವಾ ವರ್ತಮಾನದ ವ್ಯಂಗ್ಯವೋ ತಿಳಿಯಲಾಗದು. ಭಾರತದಲ್ಲಿ ೫೦ ಕೋಟಿಗೂ ಅಧಿಕ ಜನ ಶೌಚಾಲಯಗಳಿಂದ ವಂಚಿತರಾಗಿದ್ದಾರೆ. ಆದರೆ, ೧೨೦ ಕೋಟಿ ಜನಸಂಖ್ಯೆಗೆ ೯೨ ಕೋಟಿ ಮೊಬೈಲ್ ಚಂದಾದಾರರಿದ್ದಾರೆ. ಭಾರತದ ಅಭಿವೃದ್ಧಿಯನ್ನು ಮೊಬೈಲ್ ಚಂದಾದಾರರ ಮೂಲಕ ಅಳೆಯಬೇಕೋ? ಅಥವಾ ಶಚಾಲಯ ವಂಚಿತರಿಂದ ಅಳೆಯಬೇಕೋ? ನೀವೇ ನಿರ್ಧರಿಸಿ. ಇದೀಗ ನಮ್ಮ ಪ್ರಧಾನ ಮಂತ್ರಿ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಉಚತ ಮೊಬೈಲ್ ಹಾಗೂ ತಿಂಗಳಿಗಿ ೨೦೦ ರುಪಾಯಿಗಳ ಮಾತನಾಡುವ ಸಮಯ ನೀಡಲು ಮುಂದಾಗಿದ್ದಾರೆ. ೨೦೧೧ರ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ೭,೫೦,೦೦,೦೦೦ ಹಳ್ಳಿಗಳು ವಿದ್ಯುತ್ ಸೌಲಭ್ಯಗಳಿಂದ ವಂಚಿತವಾಗಿವೆ. ೨೦೦೪ರ ಕೇಂದ್ರ ಸರ್ಕಾರ ಹಮ್ಮಿಕೊಂಡ ರಾಜೀವ್‌ಗಾಂಧೀ ಗ್ರಾಮೀಣ ವಿದ್ಯುತ್ ಯೋಜನೆಯ ಪ್ರಕಾರ ಐದು ವರ್ಷದ ಅವಧಿಯಲ್ಲಿ ದೇಶದ

ಎಲ್ಲಾ ಮನೆಗಳಿಗೂ ಬೆಳಕು ಹರಿಯಬೇಕಿತ್ತು. ಈಗ ಯೋಜನೆಯ ಗುರಿಯನ್ನು ೨೦೧೨ಕ್ಕೆ ವಿಸ್ತರಿಸಿಲಾಗಿದೆ. ದೇಶದಲ್ಲಿ ಪ್ರತಿವರ್ಷ ಶೇ.೧೫ರಷ್ಟು ವಿದ್ಯುತ್ ಬೇಡಿಕೆ ಇದ್ದು, ಹೊಸದಾಗಿ ಉತ್ಪಾದನೆಯಾಗುತ್ತಿರುವುದು ಕೇವಲ ಶೇ.೯ರಷ್ಟು ಮಾತ್ರ. ಉತ್ಪಾದನೆಯಾಗುತ್ತಿರುವ ವಿದ್ಯುತ್‌ನಲ್ಲಿ ವಿತರಣೆಯ ಸಮಯದಲ್ಲಿ ಕಳಪೆ ತಾಂತ್ರಿಕ ಗುಣಮಟ್ಟ ಮತ್ತು ನಿರ್ವಹಣೆಯಿಂದಾಗಿ ಶೇ.೨೫ರಿಂದ ಶೇ.೪೦ರಷ್ಟು ಬಳಕೆಗೆ ಬಾರದೆ ಸೋರಿಹೋಗುತ್ತಿದೆ. ಇವತ್ತಿನ ಬಡಜನತೆಗೆ ಅಗತ್ಯವಾಗಿ ಬೇಕಾಗಿರುವುದು ಮೊಬೈಲ್‌ಗಳಲ್ಲ, ಬದಲಾಗಿ ರೋಗಮುಕ್ತ ಜೀವನ. ಆ ಕುಟುಂಬಗಳಿಗೆ ಸೊಳ್ಳೆಗಳಿಂದ ಮುಕ್ತಿ ಪಡೆಯಲು ಸೊಳ್ಳೆ ಪರದೆ ವಿತರಣೆಯಾದರೆ ಮಲೇರಿಯಾ, ಡೆಂಗ್ಯೂ ಮುಂತಾದ ಕಾಯಿಲೆಗಳಿಂದ ಈ ಅಮಾಯಕರನ್ನು ರಕ್ಷಿಸಬಹುದು ಎಂಬ ಕನಿಷ್ಠ ತಿಳುವಳಿಕೆ ಮತ್ತು ಜ್ಞಾನ ವಿಶ್ವವಿಖ್ಯಾತ ಆರ್ಥಿಕ ತಜ್ಞರೆನಿಸಿಕೊಂಡ ನಮ್ಮ ಪ್ರಧಾನಿಗೆ ಇಲ್ಲವಾದರೆ ದೇಶದ ಗತಿಯೇನು? ಈ ಜನರ ಭವಿಷ್ಯವೇನು?

ಈ ದೇಶದ ಆರೋಗ್ಯವಲಯವಂತೂ ಸುಧಾರಿಸಲಾರದ ಹಂತವನ್ನು ತಲುಪಿದೆ. ಆರೋಗ್ಯ ಸೇವೆ ಬಡವರ ಪಾಲಿಗೆ ನಿಲುಕದ ನಕ್ಷತ್ರದಂತಾಗಿದೆ. ಜಾಗತೀಕರಣದ ಫಲವಾಗಿ ಜಗತ್ತಿನ ಬಹತೇಕ ರಾಷ್ಟ್ರಗಳ ಸರ್ಕಾರಗಳು ಸಾಮಾಜಿಕ ಕಲ್ಯಾಣ ಕಾರ್ಯಗಳಿಂದ ಹಿಂದೆ ಸರಿದು ಖಾಸಗೀಕರಣಕ್ಕೆ ಹಾದಿ ಮಾಡಿಕೊಟ್ಟಿವೆ. ಕಳೆದ ಐದು ವರ್ಷಗಳಲ್ಲಿ ಜೀವರಕ್ಷಕ ಔಷಧಗಳ ಬೆಲೆದುಪ್ಪಟ್ಟಾಗಿದೆ. ಈಗಾಗಲೇ ಪಾಶ್ಚಿಮಾತ್ಯ ದೇಶಗಳಲ್ಲಿ ಜೀವಕ್ಕೆ ಅಡ್ಡಪರಿಣಾಮಗಳಿಂದ ಅಪಾಯ ಎಂದು ತಿರಸ್ಕರಿಸುವ ಸುಮಾರು ೪೦ ವಿವಿಧ ಬಗೆಯ ಔಷಧಗಳು ಭಾರತದ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿವೆ. ಇದಲ್ಲದೆ ಯಾವುದೇ ಪೂರ್ವ ಪ್ರಯೋಗಗಳಿಲ್ಲದೆ ಮಾರುಕಟ್ಟೆಗೆ ೩೩ ಔಷಧಗಳು ಬಿಡುಗಡೆಯಾಗಿವೆ. ಈ ಬಗ್ಗೆ ಕೇಂದ್ರ ಸರ್ಕಾರ ತನಿಖೆಗೆ ಉನ್ನತ ಸಮಿತಿಯೊಂದನ್ನು ನೇಮಕ ಮಾಡಿದ ಮರುದಿನವೇ ಕೇಂದ್ರ ಆರೋಗ್ಯ ಸಚಿವರ ಕಛೇರಿಯಲ್ಲಿ ಈ ಹಗರಣದ ಫೈಲ್ ಕಾಣೆಯಾಗಿದೆ. ನಾವು ಎಂತಹ ಕೀಳು ಮಟ್ಟದ ಅಭಿರುಚಿಯ ಆರೋಗ್ಯಸಚಿವರನ್ನು (ಗುಲಾಂನಬಿ ಆಜಾದ್) ಪಡೆದಿದ್ದೇವೆ ಎಂದರೆ, ಜನಸಂಖ್ಯೆಯ ನಿಯಂತ್ರಣಕ್ಕೆ ಪ್ರತಿಮನೆಯಲ್ಲಿ ಟಿ.ವಿ.ಇರಬೇಕು ಎಂಬುದು ಅವರ ಅಭಿಮತ. ಏಕೆಂದರೆ, ತಡ ರಾತ್ರಿ ಜನತೆ ಧಾರಾವಾಹಿಗಳನ್ನು ನೋಡುವುದರಿಂದ ಲೈಂಗಿಕ ಕ್ರಿಯೆಯಿಂದ ದೂರವಿರುತ್ತಾರೆ ಎಂಬುದು ನಮ್ಮ ಆರೋಗ್ಯ ಸಚಿವರ ನೂತನ ಸಂಶೋಧನೆ! (ದಿನಾಂಕ ೧೨-೭-೧೨ರ ದೆಹಲಿ ಆವೃತ್ತಿ ಡಿ.ಎನ್.ಎ ಇಂಗ್ಲಿಷ್ ದೈನಿಕಕ್ಕೆ ನೀಡಿರುವ ಹೇಳಿಕೆ) ಈ ದಿನ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ವೈದ್ಯರೇ ಸಿಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಡವರ ಪಾಲಿಗೆ ಸಂಜೀವಿನಿಯಾಗಿದ್ದ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ವೈದ್ಯರಿಲ್ಲದೆ ಪಾಳುಬಿದ್ದಿವೆ. ಇತ್ತೀಚೆಗಿನ ದಿನಗಳಲ್ಲಿ ದುಬಾರಿಯಾದ ವೈದ್ಯಕೀಯ ಶಿಕ್ಷಣದಿಂದಾಗಿ ಪ್ರತಿಯೊಬ್ಬ ವೈದ್ಯನೂ, ಕಡಿಮೆ ವೇತನದ ಸರ್ಕಾರಿ ಹುದ್ದೆಗೆ ಬದಲಾಗಿ ಖಾಸಗಿಯಾಗಿ ದುಡಿಯಲು ಪ್ರಯತ್ನಿಸುತ್ತಿದ್ದಾನೆ.

೨೦೦೮ರ ಮಾರ್ಚ್ ಅಂತ್ಯದ ವೇಳೆಗೆ ಭಾರತದಲ್ಲಿ ನೋಂದಣಿಯಾದ ವೈದ್ಯರ ಸಂಖ್ಯೆ ೯೫,೫೨೪. ಅಂದರೆ, ಸರಾಸರಿ ಪ್ರತಿಹತ್ತ ಸಾವಿರ ಜನಸಂಖ್ಯೆಗೂ ಒಬ್ಬ ವೈದ್ಯನಿಲ್ಲದ ಸ್ಥಿತಿ. ಚೀನಾದಲ್ಲಿ ಪ್ರತಿ ಸಾವಿರಕ್ಕೆ ೧೪ ವೈದ್ಯರಿದ್ದಾರೆ. ಐರೋಪ್ಯ

ರಾಷ್ಟ್ರಗಳಲ್ಲಿ ಪ್ರತಿನೂರು ಜನಸಂಖ್ಯೆಗೆ ಒಬ್ಬ ದಾದಿ ಇದ್ದರೆ, ಭಾರತದಲ್ಲಿ ಪ್ರತಿ ೨೧೧೫ ಜನಸಂಖ್ಯೆಗೆ ಓರ್ವ ದಾದಿ ಇದ್ದಾಳೆ. ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಯಂತೆ ಆಫ್ರಿಕಾ ದೇಶಗಳಲ್ಲಿ ಅಲ್ಲಿನ ಸರ್ಕಾರಗಳು ತಮ್ಮ ಆಯವ್ಯಯದ ಶೇ.೬.೨ರಷ್ಟನ್ನು ವಿನಿಯೋಗಿಸುತ್ತಿದ್ದರೆ, ಭಾರತದಲ್ಲಿ ವಿನಿಯೋಗದ ಪ್ರಮಾಣ ಶೇ.೪.೧ರಷ್ಟು ಮಾತ್ರ.

೨೦೨೦ನೇ ಇಸವಿ ವೇಳಗೆ ಭಾರತಕ್ಕೆ ಗ್ರಾಮೀಣ ಪ್ರದೇಶಗಳೂ ಸೇರಿದಂತೆ ೭.೪೨ ಲಕ್ಷ ಸಹಾಯಕ ದಾದಿಯರು, ೪.೪ಲಕ್ಷ ಪುರುಷ ಶುಶ್ರೂಷಕರು, ೧೪.೯ಲಕ್ಷ ನುರಿತ ನರ್ಸ್‌ಗಳು, ೩.೬೭ಲಕ್ಷ ವೈದ್ಯರು, ೨ ಲಕ್ಷ ತಜ್ಞವೈದ್ಯರು ಬೇಕಾಗಿದ್ದಾರೆ ಎಂದು ಅಂದಾಜಿಸಲಾಗಿದೆ. ಇವರನ್ನು ಸೃಷ್ಟಿಸಬೇಕಾದ ಭಾರತೀಯ ವೈದ್ಯಕೀಯ ಮಂಡಲಿ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿ ಹೋಗಿದೆ. ಇದರ ಅಧ್ಯಕ್ಷ (ಕೇತನ್ ದೇಸಾಯಿ) ಎಂಬ ವ್ಯಕ್ತಿಯ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗಿ ಸೆರೆಮನೆಯಲ್ಲಿ ಕಂಬಿ ಎಣಿಸುತ್ತಿದ್ದಾನೆ. ಇಂತಹ ದಯನೀಯವಾದ ಸ್ಥಿತಿಯಲ್ಲಿ ಅಭಿವೃದ್ಧಿ ಕುರಿತಂತೆ ಮಾನದಂಡವನ್ನು ಹೇಗೆ ಬಳಸಬೇಕು? ಅಸ್ತ್ರಶಾಸ್ತ್ರಜ್ಞರು ಉತ್ತರಿಸಬೇಕಿದೆ.

ವಿಶ್ವಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ ನಡೆಸಿದ ಜಗತ್ತಿನ ೧೬೯ ರಾಷ್ಟ್ರಗಳ ಸಮೀಕ್ಷಾ ವರದಿಯ ಪ್ರಕಾರ ೨೦೦೯ರಲ್ಲಿ ಮಾನವ ಅಭಿವೃದ್ಧಿಯಲ್ಲಿ ೧೧೯ನೇ ಸ್ಥಾನದಲ್ಲಿದ್ದ ಭಾರತ ೨೦೧೧ರಲ್ಲಿ ೧೩೪ನೇ ಸ್ಥಾನಕ್ಕೆ ಕುಸಿದಿದೆ. ಅಚ್ಚರಿಯ ಸಂಗತಿ ಎಂದರೆ ಜನಾಂಗೀಯ ಕಲಹದಲ್ಲಿ ನಲುಗಿದ ಶ್ರೀಲಂಕಾ ೧೦೧ನೇ ಸ್ಥಾನ ಪಡೆದಿದೆ. ಬಡತನ ಮತ್ತು ಜಾಗತೀಕರಣದ ಪರಿಣಾಮಗಳ ಕುರಿತಂತೆ ಭಾರತ ಮತ್ತು ಚೀನಾ ರಾಷ್ಟ್ರಗಳ ಬಗ್ಗೆ ತೌಲನಿಕ ಅಧ್ಯಯನ ನಡೆಸಿ 'Chinese and Indian Strategic Behaviour' ಎಂಬ ಕೃತಿ ಪ್ರಕಟಿಸಿರುವ ಜೆ.ಗಿಲ್ ಬಾಯ್ ಮತ್ತು ಎರಿಕ್ ಹಿಗ್ಗಿನ್ ಬಾತಮ್ ಎಂಬುವರು.

ಚೀನಾ ದೇಶದಲ್ಲಿ ೧೯೮೧ರಲ್ಲಿ ಶೇ.೮೪ರಷ್ಟು ಇದ್ದ ಬಡತನ ೨೦೦೫ರ ವೇಳೆಗೆ ಶೇ.೧೬ಕ್ಕೆ ಇಳಿದಿರುವುದನ್ನು ಪ್ರಕಟಿಸುತ್ತಾ, ಚೀನಾದಲ್ಲಿ ಭ್ರಷ್ಟಾಚಾರ ನಿಗ್ರಹ ಕುರಿತಂತೆ ಗಲ್ಲು ಶಿಕ್ಷೆಯಂಥ ಕಠಿಣ ಕಾನೂನುಗಳು ಜಾರಿಯಲ್ಲಿರುವುದರಿಂದ ಅಲ್ಲಿಯ ಅಭಿವೃದ್ಧಿಗೆ ವಿನಿಯೋಗಿಸುವ ಹಣ ಸದ್ಬಳಕೆಯಾಗುತ್ತಿದ್ದು ಬಡತನ ನಿವಾರಣೆಗೆ ಸಹಕಾರಿಯಾಗಿದ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದೇ ವೇಳೆ ಭಾರತದ ಬಡತನ ೧೯೮೧ರಿಂದ ೨೦೦೫ರ ಸಮಯದಲ್ಲಿ ಶೇ.೬೦ರಿಂದ ಶೇ.೪೨ಕ್ಕೆ ಇಳಿದಿರುವುದನ್ನು ಅವರು ಗುರುತಿಸಿದ್ದಾರೆ. ಜಾಗತೀಕರಣದ ಬಗ್ಗೆ ಅಥವಾ ಅದರ ಕೂಸಾದ ಮುಖ್ಯ ಮಾರುಕಟ್ಟೆಯ ಪ್ರಕ್ರಿಯೆಗಳ ಬಗ್ಗೆ ಅರ್ಥಶಾಸ್ತ್ರಜ್ಞರು, ಇಲ್ಲವೇ ಅವುಗಳ ವಕ್ತಾರರು ಏನೇ ಹೇಳಲಿ, ಇವತ್ತಿಗೂ ಜಗತ್ತಿನಾದ್ಯಂತ ಪ್ರತಿ ಏಳು ಮಂದಿಗೆ ಒಬ್ಬ ಪ್ರಜೆ ಹಸಿವಿನಿಂದ ಬಳಲುತ್ತಿದ್ದಾನೆ. ಜಗತ್ತಿನ ಏಳುನೂರು ಕೋಟಿ ಜನಸಂಖ್ಯೆಯಲ್ಲಿ ತೊಂಭತ್ತೆರಡು ಕೋಟಿ ಐವತ್ತು ಲಕ್ಷ ಜನತೆ ಹಸಿವಿನಿಂದ ಕಂಗೆಟ್ಟಿದ್ದಾರೆ. ಮುಂದುವರೆದ ರಾಷ್ಟ್ರಗಳೆಂದು ಗುರುತಿಸಿಕೊಂಡಿರುವ ಅಮೆರಿಕಾ, ಬ್ರಿಟನ್, ಫ್ರಾನ್ಸ್, ಕೆನಡಾ ರಾಷ್ಟ್ರಗಳಲ್ಲಿ ೧ ಕೋಟಿ ೯೦ಲಕ್ಷ ಜನತೆ, ಬ್ರಿಜಿಲ್, ಅರ್ಜೆಂಟೈನಾ, ಚಿಲಿ ಸೇರಿದಂತೆ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ ೫ ಕೋಟಿ ೩೦ ಲಕ್ಷ ಜನತೆ, ಉತ್ತರ ಮತ್ತು ಪೂರ್ವ ಆಫ್ರಿಕಾ ರಾಷ್ಟ್ರಗಳಲ್ಲಿ ೩ಕೋಟಿ ೫೦ಲಕ್ಷ ಜನತೆ, ಸೊಮಾಲಿಯಾ, ಇಥಿಯೋಪಿಯಾ, ರುವಾಂಡ ಸೇರಿದಂತೆ ಸಬ್-ಸಹರಾ ಪ್ರಾಂತದ ರಾಷ್ಟ್ರಗಳಲ್ಲಿ

೨ಕೋಟಿ ೩೯ಲಕ್ಷ ಜನತೆ, ಮತ್ತು ಚೀನಾ, ಭಾರತ, ಪಾಕಿಸ್ತಾನ, ಬಾಂಗ್ಲಾ, ನೇಪಾಳ ಸೇರಿದಂತೆ ಏಷಿಯಾ ರಾಷ್ಟ್ರಗಳಲ್ಲಿ ೫ಕೋಟಿ ೭೮ಲಕ್ಷ ಜನತೆ ಹಸಿವಿನ ಬಲೆಯೊಳಗೆ ಬಂಧಿಯಾಗಿದ್ದಾರೆ.

ಯಾವುದೇ ಒಂದು ರಾಷ್ಟ್ರದ ಅಭಿವೃದ್ಧಿ ಬೆಳವಣಿಗೆಯಲ್ಲಿ ಮಾನವ ಸಂಪನ್ಮೂಲ ಅತಿಮುಖ್ಯವಾದ ಆಧಾರ. ಇಂತಹ ಸಂಪನ್ಮೂಲವನ್ನು ಸೃಷ್ಟಿಸುವಲ್ಲಿ ಶಿಕ್ಷಣ ವ್ಯವಸ್ಥೆ ಇದಕ್ಕೆ ಅಡಿಪಾಯವಾಗಿರುತ್ತದೆ.

ಅಭಿವೃದ್ಧಿಶೀಲ ರಾಷ್ಟ್ರ ಮತ್ತು ಜಗತ್ತಿನಲ್ಲಿ ಅತಿವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿ ಎಂದೆಲ್ಲಾ ಗುರುತಿಸಿಕೊಂಡಿರುವ ಭಾರತದ ಶಿಕ್ಷಣ ವ್ಯವಸ್ಥೆ ನಿಜಕ್ಕೂ ಗಾಬರಿಪಡುವಂಥದ್ದು. ಇಲ್ಲಿನ ಪ್ರೈಮರಿ ಶಾಲೆಯಿಂದ ಹಿಡಿದು ಉನ್ನತ ಶಿಕ್ಷಣದ ವರೆಗೆ ಎಲ್ಲವೂ ಖಾಸಗಿ ಸಂಸ್ಥೆಗಳ ಕಪಿಮುಷ್ಟಿಗೆ ಸಿಲುಕಿದ್ದು, ಇದರಿಂದ ಜನ್ಮ ಪಡೆದ ಕ್ಯಾಪಿಟೇಷನ್ ಮಾಫಿಯಾ ಇವತ್ತು ಸರ್ಕಾರಗಳನ್ನು ಉರುಳಿಸಬಲ್ಲ ಶಕ್ತಿಯನ್ನು ದಕ್ಕಿಸಿಕೊಂಡಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಿರುವ ಸರ್ಕಾರಗಳು ಜನತೆಗೆ ನೀಡಬೇಕಾದ ಶಿಕ್ಷಣ, ಆರೋಗ್ಯ ಸೇವೆ ಮುಂತಾದ ಸವಲತ್ತುಗಳಿಂದ ತಮ್ಮ ಜಜವಾಬ್ದಾರಿಯನ್ನು ಕಳೆದುಕೊಂಡು ಖಾಸಗೀಕರಣಗೊಳಿಸುತ್ತಿರುವುದು ನಿಜಕ್ಕೂ ಆತಂಕಕಾರಿಯಾದುದು. ಈಗ ಉಳ್ಳವರಿಗಷ್ಟೇ ಶಿಕ್ಷಣ ಎಂಬತಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ, ದೇಶದ ಬಹುತೇಕ ಉನ್ನತ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳು ಇಲ್ಲಿನ ರಾಜಕಾರಣಿಗಳು, ಇಲ್ಲವೇ ಧಾರ್ಮಿಕ ಸಂಸ್ಥೆಗಳ ಒಡೆತನದಲ್ಲಿವೆ. ಸರ್ಕಾರಿ ಶಾಲೆಗಳ ಬಗ್ಗೆ ಸರ್ಕಾರಗಳು ತಾಳಿದಿ ನಿರ್ಲಕ್ಷ್ಯ ಧೋರಣೆಯಿಂದಾಗಿ ಒಂದೊಂದಾಗಿ ಕಣ್ಮುಚ್ಚುತ್ತಿವೆ. ದುಬಾರಿ ಶಿಕ್ಷಣ ಶುಲ್ಕ ಮತ್ತು ಡೊನೇಷನ್‌ನಂತಹ ಅಪಾಯಕಾರಿ ಬೆಳವಣಿಗೆಯಿಂದಾಗಿ ಇವತ್ತಿಗೂ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಶೇ.೧೧ರಷ್ಟನ್ನು ದಾಟಿಲ್ಲ. ಈ ದೇಶದಲ್ಲಿ ನೂರಾರು ವಿಶ್ವವಿದ್ಯಾನಿಲಯಗಳಿವೆ. ಅಲ್ಲಿ ಪ್ರತಿವರ್ಷ ಸಂಶೋಧನೆ ಹೆಸರಿನಲ್ಲಿ ಚಟುವಟಿಕೆಗಳು ನಡೆಯುತ್ತಿವೆ. ಡಾಕ್ಟರೇಟ್ ಪದವಿಗಳು ವಿತರಣೆಯಾಗುತ್ತಿವೆ..

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಂತಹ ಒಂದೆರಡು ಸಂಸ್ಥೆಗಳನ್ನು ಹೊರತುಪಡಿಸಿದರೆ, ಇಲ್ಲಿನ ವಿ.ವಿಗಳು ಪದವಿ ನೀಡಿರುವ ಸಂಶೋಧನೆಗಳಿಂದ ದೇಶಕ್ಕೆ ಎಷ್ಟರಮಟ್ಟಿಗೆ ಪ್ರಯೋಜನವಾಗಿದೆ? ಎಷ್ಟು ಪ್ರಬಂಧಗಳು ಪ್ರಕಟವಾಗಿವೆ? ಯಾರಲ್ಲೂ ಸ್ಪಷ್ಟ ಮಾಹಿತಿ ಇಲ್ಲ. ಇಂದಿಗೂ ಜಗತ್ತಿನ ನೂರು ಶ್ರೇಷ್ಠ ವಿ.ವಿಗಳ ಪೈಕಿ ಭಾರತದ ಯಾವ ವಿಶ್ವವಿದ್ಯಾನಿಲಯವೂ ಸ್ಥಾನ ಪಡೆದಿಲ್ಲ. ಇದು ನಮ್ಮ ಶಿಕ್ಷಣ ವ್ಯವಸ್ಥೆಯ ನಾಚಿಕೆಗೇಡಿನ ಸಂಗತಿ ಎಂದೂ ಯಾರಿಗೂ ಅನಿಸಿಲ್ಲ.

ಕರ್ನಾಟಕದ ಉದಾಹರಣೆ ತೆಗೆದುಕೊಂಡರೆ, ರಾಜಕೀಯ ಕಾರಣದಿಂದಾಗಿ ಇಲ್ಲಿ ಪ್ರತಿವರ್ಷ ಎರಡು ಹೊಸ ವಿಶ್ವವಿದ್ಯಾನಿಲಯಗಳು ನಾಯಿಕೊಡೆಯಂತೆ ಹುಟ್ಟುತ್ತಿವೆ. ಹೊಸ ವಿ.ವಿಗಳಲ್ಲಿ ಶೇ.೬೦ರಷ್ಟು ಉಪನ್ಯಾಸಕರು, ಪ್ರಾಧ್ಯಾಪಕರು ನೇಮಕವಾಗಿಲ್ಲ. ಹಳೆಯ ವಿ.ವಿಗಳಲ್ಲಿ ಬಡ್ತಿ, ಮೀಸಲಾತಿ ಮುಂತಾದ ಕಾರಣಗಳಿಂದ ಶೇ.೪೦ರಷ್ಟು ಸ್ಥಾನಗಳು ಭರ್ತಿಯಾಗಿಲ್ಲ. ಕರ್ನಾಟಕದ ಅತೀ ಹಳೆಯದಾದ ಎರಡನೇ ವಿ.ವಿ ಎಂಬ ಹೆಗ್ಗಳಿಕೆಗೆ ಗುರಿಯಾಗಿರುವ ಧಾರವಾಡದ ಕರ್ನಾಟಕ

ವಿಶ್ವವಿದ್ಯಾನಿಲಯದಲ್ಲಿ ಕಳೆದ ಎರಡು ವರ್ಷದಿಂದ ಎಲ್ಲಾ ವಿಧವಾದ ಸಂಶೋಧನೆ ಚಟುವಟಿಕೆಗಳು ಸ್ಥಗಿತಗೊಂಡಿವೆ. ಮಾರ್ಗದರ್ಶಿ ಅಧ್ಯಾಪಕರ ಕೊರತೆಯ ನೆಪದಲ್ಲಿ ಪಿ.ಎಚ್.ಡಿ ಸಂಶೋಧನೆಯ ಅವಕಾಶಗಳಿಂದ ವಿದ್ಯಾರ್ಥಿಗಳು ವಂಚಿತರಾಗಿದ್ದಾರೆ. ಅಮೇರಿಕಾದಲ್ಲಿ ಅಲ್ಲಿ ಪ್ರಮುಖ ಸಂಸ್ಥೆಯಾದ ನಾಸಾ ಸಂಸ್ಥೆಯಿಂದ ಹಿಡಿದು ವಿಜ್ಞಾನ ಮತ್ತು ಆರೋಗ್ಯ ವಿಷಯಗಳಲ್ಲಿ ನಿರತವಾಗಿರುವ ಸಂಸ್ಥೆಗಳಲ್ಲಿ ಎರಡು ಲಕ್ಷ ಪ್ರತಿಭಾವಂತ ಭಾರತೀಯ ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ ಎಂದರೆ, ನಮ್ಮ ಶಿಕ್ಷಣ ವಲಯದ ಅವ್ಯವಸ್ಥೆಗೆ ಇದಕ್ಕಿಂತ ಬೇರೆ ಕೈಗನ್ನಡಿ ಬೇಕೆ?

ಇವತ್ತಿಗೂ ಭಾರತದ ಬೆನ್ನೆಲುಬಾಗಿ ಇಲ್ಲಿನ ಆರ್ಥಿಕ ಚಟುವಟಿಕೆಯ ಅಡಿಪಾಯವಾಗಿದ್ದುಕೊಂಡು ಶೇ.೭೦ರಷ್ಟು ಜನಕ್ಕೆ ಉದ್ಯೋಗ ನೀಡಿರುವ ಕೃಷಿಯ ರಂಗವನ್ನು ವ್ಯವಸ್ಥಿತವಾಗಿ ಶೋಷಣೆಗೆ ಒಳಪಡಿಸಿರುವುದನ್ನು ನೋಡಿದರೆ, ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗಿನ ಸರ್ಕಾರದಲ್ಲಿ ನಾವು ಬದುಕುತ್ತಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ಮುಜುಗರವಾಗುತ್ತದೆ, ಒಂದುಕಡೆ ಸಾಂಪ್ರದಾಯಕವಾಗಿ ಅನುಕರಿಸಿಕೊಂಡು ಬಂದಿದ್ದ ರೈತರ ಕೃಷಿ ಜ್ಞಾನವನ್ನು ಕಿತ್ತುಹಾಕಿ, ಅವರನ್ನು ಬಿತ್ತನೆ ಬೀಜದಿಂದ ಹಿಡಿದು ರಾಸಾಯನಿಕ ಗೊಬ್ಬರ, ಕೀಟನಾಶಕ ಮುಂತಾದ ಕೃಷಿ ಚಟುವಟಿಕೆಗಳ ಮೂಲಭೂತ ಅಗತ್ಯಗಳಿಗೆ ಪರಾವಂಬಿಯನ್ನಾಗಿ ಮಾಡಲಾಯಿತು. ಇನ್ನೊಂದೆಡೆ ರೈತರು ಬೆಳೆದ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರಕದಂತೆ ಮಾಡಿ ಅವನ ಶ್ರಮದ ಪ್ರತಿಫಲವನ್ನು ಕಾಣದ ಕೈಗಳು ಅನುಭವಿಸುವಂತಾಯಿತು.

ರೈತರ ಶೋಷಣೆಗೆ ಎಷ್ಟೊಂದು ಮುಖಗಳು ಮತ್ತು ಕೈಗಳು ಎಂಬುದಕ್ಕೆ ಇದೊಂದು ಉದಾಹರಣೆ ಸಾಕು. ಇದೇ ವರ್ಷ ಫೆಬ್ರವರಿ ತಿಂಗಳಿನಲ್ಲಿ ಹುಬ್ಬಳ್ಳಿಯ ಕೃಷಿ ಮಾರುಕಟ್ಟೆಗೆ ರೈತರು ತಂದ ಈರುಳ್ಳಿ ಬೆಲೆ ದಿಢೀರನೆ ಕ್ವಿಂಟಾಲ್ ಒಂದಕ್ಕೆ ಮುನ್ನೂರೈವತ್ತು ರುಪಾಯಿಗಳಿಗೆ ಕುಸಿದು ಹೋಯಿತು. ಅದೇ ದಿನ ಮಾರುಕಟ್ಟೆಯಿಂದ ಕೇವಲ ಎಂಟು ಕಿಲೋ ಮೀಟರ್ ದೂರದಲ್ಲಿರುವ ಹುಬ್ಬಳ್ಳಿ ಮತ್ತು ಧಾರವಾಡ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಕೆ.ಜಿ.ಒಂದಕ್ಕೆ ಹತ್ತು ರುಪಾಯಿನಂತೆ ಮಾರಾಟವಾಗುತ್ತಿತ್ತು. ಅಂದರೆ, ಕ್ವಿಂಟಾಲ್‌ಗೆ ಸಾವಿರ ರುಪಾಯಿ. ಈ ಆರುನೂರ ಐವತ್ತು ರುಪಾಯಿಗಳು ಯಾರಿಗೆ ಸೇರುತ್ತಿದೆ ಎಂಬುದು ಈವತ್ತಿಗೂ ಯಕ್ಷ ಪ್ರಶ್ನೆಯಾಗಿ ಉಳಿದಿದೆ.

ಬೇಡಿಕೆ ಮತ್ತು ಸರಬರಾಜುವಿನ ಮೇಲೆ ವಸ್ತುವಿನ ಬೆಲೆ ನಿರ್ಧಾರವಾಗುತ್ತದೆ ಎಂಬ ಆರ್ಥಿಕ ಸಿದ್ಧಾಂತವಾಗಲಿ, ಮಾರುಕಟ್ಟೆ ತನ್ನ ಸ್ವಯಂಚಾಲಿತ ವ್ಯವಸ್ಥೆಯಲ್ಲಿ ಲಾಭ ಮತ್ತು ನಷ್ಟವನ್ನು ನಿರ್ಧರಿಸುತ್ತದೆ. ಎಂಬ ಜಾಗತಿಕರಣದ ವಕ್ತಾರರ ಖಾಲಿ ಮಾತುಗಳೆಲ್ಲಾ ಅರ್ಥ ಕಳೆದುಕೊಂಡಿವೆ ಎಂದು ವಿವರಿಸಲು ಇದಕ್ಕಿಂತ ಬೇರೆ ಯಾವ ಉದಾಹರಣೆ ಬೇಕು? ಈ ಕಾರಣಕ್ಕಾಗಿ ನಮ್ಮ ದೇಶದ ಖ್ಯಾತ ಆರ್ಥಿಕ ತಜ್ಞರಲ್ಲಿ ಒಬ್ಬರಾದ ಅಮಿತ್ ಬಾಧುರಿಯವರು ತಮ್ಮ "This Face you Were Afraid to See" ಎಂಬ ಕೃತಿಯಲ್ಲಿ ಕೃಷಿ ಲೋಕದ ವಂಚನೆಗಳನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಇತ್ತೀಚೆಗಿನ ದಿನಗಳಲ್ಲಿ ರೈತರ ಫಲವತ್ತಾದ ಕೃಷಿ ಭೂಮಿ ಕೈಗಾರಿಕೆಗಳ ವಿಶೇಷ ಆರ್ಥಿಕ ವಲಯಗಳ ನೆಪದಲ್ಲಿ ಬೃಹತ್ ಕಂಪನಿಗಳ ಪಾಲಾಗುತ್ತಿದ್ದರೆ,

ಈ ನೆಲದ ನಿಜವಾದ ಮಕ್ಕಳಾದ ಆದಿವಾಸಿಗಳು ಮತ್ತು ಬುಡಕಟ್ಟು ಜನಾಂಗ ಅತಂತ್ರರಾಗಿದ್ದಾರೆ.

ಅವರ ಜೀವನಾಡಿಯಾದ ಅರಣ್ಯದಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದಾಗಿ ತಮ್ಮ ತಮ್ಮ ನೆಲೆಗಳಿಂದ ಹೊರದೂಡಲ್ಪಟ್ಟಿದ್ದಾರೆ. ಮಧ್ಯಪ್ರದೇಶ, ಒರಿಸ್ಸಾ, ಛತ್ತೀಸ್‌ಗಢ ಈ ಮೂರು ರಾಜ್ಯಗಳಲ್ಲಿ ಲಕ್ಷಾಂತರ ಆದಿವಾಸಿ ಕುಟುಂಬಗಳು ಬೀದಿಗೆ ಬಿದ್ದಿವೆ. ಅರಣ್ಯದಲ್ಲಿ ವಾಸಿಸಲು ಹಾಗೂ ಅಲ್ಲಿನ ಕಿರು ಉತ್ಪನ್ನಗಳನ್ನು ಸಂಗ್ರಹಿಸಿಕೊಂಡು ಜೀವನ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಅರಣ್ಯ ಕಾಯ್ದೆ ಅಸ್ತಿತ್ವಕ್ಕೆ ಬಂದಿದ್ದರೂ ಸಹ, ಖಾಸಗಿ ಬೃಹತ್ ಕಂಪನಿಗಳ ಜೊತೆ ಶಾಮೀಲಾಗಿರುವ ಸ್ಥಳೀಯ ಸರ್ಕಾರಗಳು ಈ ಅನಕ್ಷರಸ್ಥ ಅಮಾಯಕರನ್ನು ಅರಣ್ಯದಿಂದ ನಿರ್ದಯವಾಗಿ ಹೊರದೂಡುತ್ತಿವೆ.

ಇವರಿಗೆ ಸದ್ಯಕ್ಕೆ ಅರಣ್ಯ ಪ್ರದೇಶಗಳಲ್ಲಿ ಹೆಚ್ಚು ಕ್ರಿಯಾಶೀಲರಾಗಿರುವ ನಕ್ಸಲೀಯರು ಮಾತ್ರ ಆಪದ್ಬಾಂಧವರೆನಿಸಿದ್ದಾರೆ. ಬುಡಕಟ್ಟು ಜನಾಂಗದ ಅತಂತ್ರ ಸ್ಥಿತಿ ಪರೋಕ್ಷವಾಗಿ ನಕ್ಸಲೀಯರಿಗೆ ವರವಾಗಿದೆ. ಅನೇಕ ಗುಂಪುಗಳಾಗಿ ಒಡೆದು ಹೋಗಿರುವ ಮಾವೋವಾದಿ ನಕ್ಸಲೀಯರ ತಂಡಗಳಿಗೆ ಖಾಸಗಿ ಗಣಿ ಕಂಪನಿಗಳಿಂದ ಪ್ರತಿತಿಂಗಳು ಲಕ್ಷಾಂತರ ರುಪಾಯಿ ಹಫ್ತಾ ಹೆಸರಿನಲ್ಲಿ ಹರಿದು ಬರುತ್ತಿದೆ.

ವರ್ತಮಾನದ ಭಾರತದ ಜಾರಿಯಲ್ಲಿರುವ ಅಭಿವೃದ್ಧಿಯ ಮಾದರಿಗಳನ್ನು ನೋಡಿದಾಗ ಅಭಿಮಾನಕ್ಕಿಂತ ಆತಂಕವೇ ಸೃಷ್ಟಿಯಾಗುತ್ತಿದೆ. ಇದೇ ಆಗಸ್ಟ್ ೧೭ರಂದು ಸಂಸತ್ತಿನಲ್ಲಿ ಮಂಡಿಸಲಾದ ಕೇಂದ್ರ ಮಹಾಲೇಖಪಾಲರ ವರದಿ ಅಭಿವೃದ್ಧಿಯ ಕರಾಳ ಮುಖವನ್ನು ಅನಾವರಣಗೊಳಿಸಿದೆ. ಕಲ್ಲಿದ್ದಲು ನಿಕ್ಷೇಪ ಹರಾಜಿನಲ್ಲಿ ೧.೮೬ಲಕ್ಷ ಕೋಟಿ ಮತ್ತು ದೆಹಲಿ ವಿಮಾನ ನಿಲ್ದಾಣದ ನಿರ್ವಹಣೆಯ ಗುತ್ತಿಗೆಯಲ್ಲಿನ ಅವ್ಯವಹಾರದಿಂದ ೮೮,೩೩೭ ಕೋಟಿ ಹಾಗೂ ಹೆಚ್ಚುವರಿ ಕಲ್ಲಿದ್ದಲು ನಿಕ್ಷೇಪ ಹರಾಜಿನಿಂದ ೨೯ಸಾವಿರದ ೩೩ಕೋಟಿ ರುಪಾಯಿಗಳು ಬೊಕ್ಕಸಕ್ಕೆ ನಷ್ಟವಾಗಿದೆ. ಈ ಬಗ್ಗೆ ಸಿ.ಎ.ಜಿ. ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಇದು ಅಭಿವೃದ್ಧಿಯ ಮುಖವಾಡ ಹಾಕಿಕೊಂಡು ಬಡತನ ನಿವಾರಣೆಯ ನೆಪದಲ್ಲಿ ನಡೆಯುತ್ತಿರುವ ಶೋಷಣೆಯ ನಾಟಕವಲ್ಲದೆ ಮತ್ತೇನು?

ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಹಾಗೂ ನೆರೆಯ ಬಾಂಗ್ಲಾ ದೇಶದ ಗ್ರಾಮೀಣ ಬ್ಯಾಂಕ್‌ನ ಸಂಸ್ಥಾಪಕ ಮಹಮದ್ ಯೂನಸ್ ರವರು ೨೦೦೯ರಲ್ಲಿ ದೆಹಲಿಯ 'ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್' ಸಂಸ್ಥೆಯಲ್ಲಿ ಭಾರತದ ಶ್ರೇಷ್ಠ ಆರ್ಥಿಕ ಚಿಂತಕರಾಗಿದ್ದ ಪ್ರೊ|| ಡಿ.ಟಿ.ಲಕ್ಡಾವಾಲ ಸ್ಮಾರಕ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಬಡತನ ಮುಕ್ತ ಜಗತ್ತು ಕುರಿತು ಮಾತನಾಡುತ್ತಾ "ಬಡತನವೆಂಬುದು ಒಂದು ವ್ಯವಸ್ಥೆ ನಿಜ. ಇದು ಬಡವರಿಂದ ನಿರ್ಮಿತವಾಗಿಲ್ಲ, ಸರ್ಕಾರಗಳಿಂದ ಮತ್ತು ಅವುಗಳ ಅಂಗ ಸಂಸ್ಥೆಗಳಿಂದ ನಿರ್ಮಾಣವಾಗಿದೆ" ಎಂದು ಪ್ರತಿಪಾದಿಸಿದ್ದರು. ಇವತ್ತಿನ ಅಭಿವೃದ್ಧಿಯ ಮಾದರಿಗಳನ್ನು ಅವಲೋಕಿಸಿದರೆ, ಅವರ ಮಾತು ನಿಜವೆನಿಸುತ್ತಿದೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಮೇಲುಕೋಟೆ ಹೋಬಳಿ ಮಟ್ಟದ ಶಿಶು ಕಲ್ಯಾಣ ಕಾರ್ಯಕರ್ತೆಯರ ಒಂದು ದಿನದ ಸಭೆ ಟ್ರಸ್ಟ್ ಆವರಣದಲ್ಲಿ ನಡೆಯಿತು. ಸುಮಾರು ೫೦ ಕಾರ್ಯಕರ್ತೆಯರು ಭಾಗವಹಿಸಿದ್ದರು. ಶಿಶುಕಲ್ಯಾಣ ಸಮಿತಿಯ ಅಧಿಕಾರಿ ಡಾ॥ದಿವಾಕರ್‌ರವರು ಸಭೆಯನ್ನು ನಡೆಸಿದರು.

ದತ್ತು ಕೇಂದ್ರದಿಂದ ಮಕ್ಕಳನ್ನು ದತ್ತುವಾಗಿ ಪಡೆದಿದ್ದ ಮೂರು ಮಕ್ಕಳ ಪೋಷಕರು ಭೇಟಿಕೊಟ್ಟರು. ಅವರು ಪೋಷಣೆ ಮಾಡಿದ ಮಕ್ಕಳು ಆರೋಗ್ಯವಾಗಿಯೂ ಸಂತೋಷವಾಗಿಯೂ ಇವೆ.

ಹೊಸ ಜೀವನ ದಾರಿ ಕೇಂದ್ರದಲ್ಲಿ ಮಂಡ್ಯದ ಜನಶಕ್ತಿ ಸಂಘಟನೆಯವರು ವೈಚಾರಿಕ ಶಿಬಿರ ನಡೆಸಿದರು.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿಯ ಇಂಗ್ಲಿಷ್ ವಿಭಾಗದಲ್ಲಿ ಗಾಂಧೀ ಸೆಮಿನಾರನ್ನು ಸುರೇಂದ್ರ ಕೌಲಗಿಯವರು ಉದ್ಘಾಟಿಸಿದರು. ಮಂಡ್ಯ ನಗರದಲ್ಲಿ ಗಾಂಧೀ ಜಯಂತಿಯಂದು ಪರಿಸರ ಮತ್ತು ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ನಡೆದ ಪಶ್ಚಾತ್ತಾಪ ಸಭೆಯಲ್ಲಿ ಭಾಗವಹಿಸಿದರು. ಗಾಂಧೀ ಜಯಂತಿಯಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ದೇವರ ದಾಸೀಮಯ್ಯ ರಾಷ್ಟ್ರೀಯ ಪ್ರಶಸ್ತಿಯನ್ನು ಸ್ವೀಕರಿಸಿದರು. ಪ್ರಶಸ್ತಿ ೫೦ ಸಾವಿರ ರೂಪಾಯಿ, ಕಂಚಿನ ಗಾಂಧೀ ಪ್ರತಿಮೆ ಮತ್ತು ಒಂದು ಸನ್ಮಾನ ಪತ್ರ ಒಳಗೊಂಡಿದೆ.

ಮಹಾರಾಷ್ಟ್ರದ ಜಳಗಾಂವ್‌ನಲ್ಲಿರುವ ಗಾಂಧೀ ರೀಸರ್ಚ್ ಫೌಂಡೇಷನ್‌ರವರು ಸುಮಾರು ೧೫೦ ಸಿದ್ಧ ಜನಪದ ಖಾದಿ ಕುರ್ತಾಗಳಿಗೆ ಆದೇಶ ಕೊಟ್ಟಿದ್ದರು. ಅದೇ ರೀತಿ ಬೆಂಗಳೂರಿನ ಜೆಟ್ ಏವಿ ಕಂಪನಿಯವರು ಸಿದ್ಧ ಉಡುಪು ಮತ್ತು ಬಟ್ಟೆಗೆ ಬೇಡಿಕೆ ಸಲ್ಲಿಸಿದ್ದರು.

ಈ ಕೆಳಗೆ ಕಾಣಿಸಿದ ಮಹನೀಯರು ಟ್ರಸ್ಟಿಗೆ ಭೇಟಿ ಕೊಟ್ಟು ಶುಭ ಹಾರೈಸಿದರು. ರಂಗ ಕರ್ಮಿ ಚಿದಂಬರರಾವ್ ಜಂಬೆ, ಶ್ರೀ ಆರ್.ಆರ್.ಮಂಗಳವೇಡೆ, ಮಂಡ್ಯ ಜಿಲ್ಲಾ ಪಂಚಾಯತ್ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಡಾ.ಎಸ್.ಸಿ.ಮಹೇಶ್, ನಬಾರ್ಡ್ ಸಂಸ್ಥೆಯ ಬಿಂದು ಮಾಧವಿ ವಡವಿ, ಮೈಸೂರು ಆಕಾಶವಾಣಿಯ ಕೇಶವ ಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಾಲಿ ಕಾರವಾರದಲ್ಲಿರುವ ಆರ್. ವೈ.ಹೂಗಾರ್ ಕಥೆಗಾರ, ನಾಗಮಂಗಲ ಕೃಷ್ಣಮೂರ್ತಿ, ಗಣಿತಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಯೋಗಾನಂದ ಪರಿವಾರ ಸಮೇತ ಭೇಟಿಕೊಟ್ಟರು.

ಜನಪದ ನಿಲಯದ ಅಂತರಂಗದಲ್ಲಿ.. ೧೧೩

– *ಸುರೇಂದ್ರ ಕೌಲಗಿ*



೧೯೬೩ ರಿಂದ ಜನಪದ ಸೇವಾ ಟ್ರಸ್ಟ್ ನಡೆಸುತ್ತಿದ್ದ ಅಂಗವಿಕಲ ಮಕ್ಕಳ ಶ್ರೇಯೋಭಿವೃದ್ಧಿ ಕೇಂದ್ರ 'ಕರುಣಾಗೃಹ' ಶಾರೀರಿಕವಾಗಿ ತೊಂದರೆ ಅನುಭವಿಸುತ್ತಿದ್ದ ಅನೇಕ ಮಕ್ಕಳಿಗೆ ದಾರಿದೀಪವಾಯಿತು. ಅನೇಕ ಮಕ್ಕಳು ಸಾಮಾನ್ಯ ವಿದ್ಯಾಭ್ಯಾಸ ಪಡೆದರಲ್ಲದೆ ಕುಂಠಿತಗೊಂಡಿದ್ದ ತಮ್ಮ ಆತ್ಮ ವಿಶ್ವಾಸವನ್ನು ಮತ್ತೆ ಚಿಗುರಿಸಿಕೊಂಡರು. ಅದರ ಫಲವಾಗಿ ಕೆಲವರು ಜೀವನದಲ್ಲಿ ಹಲವಾರು ಸಾಧನೆಗಳನ್ನು ಮಾಡಿ ಸಮಾಜದಲ್ಲಿ ಗೌರವಾನ್ವಿತ ಸ್ಥಾನ ಪಡೆದರು. ಅವರ ಸಾಧನೆ ಮತ್ತು ಕುಶಾಗ್ರಮತಿ ಅವರ ದೈಹಿಕ ವಿಕಲತೆಯನ್ನು ಮರೆಮಾಚಿತು: ಅವರ ವ್ಯಕ್ತಿತ್ವ ಬೆಳಗಿತು. ಇದಕ್ಕೆ ತುಂಬಾ ಇತ್ತೀಚಿಗಿನ ಉದಾಹರಣೆ ಕೆ.ಎಸ್.ರಾಜಣ್ಣ ಎಂಬ ಕರುಣಾಗೃಹದ ಹಳೆಯ ವಿದ್ಯಾರ್ಥಿಯ ಗಾಥೆಯನ್ನು ಹೇಳಬಹುದಾಗಿದೆ. ರಾಜಣ್ಣ ಮಂಡ್ಯ ಜಿಲ್ಲೆಯ ಕೊಪ್ಪ ಗ್ರಾಮದ ಬಾಲಕ. ವಿಶ್ವಕರ್ಮ ವರ್ಗಕ್ಕೆ ಸೇರಿದವ. ಬಾಲ್ಯದಲ್ಲಿಯೇ ಪೋಲಿಯೋ ಕಾಯಿಲೆಯ ಕಾರಣದಿಂದಾಗಿ ತನ್ನ ಎರಡೂ ಪಾದಗಳನ್ನೂ ಎರಡೂ ಹಸ್ತಗಳನ್ನೂ ಕಳೆದುಕೊಳ್ಳುವಂತಾಯಿತು. ಇದು ಸುಮಾರು ಆತ ನಾಲ್ಕುವರ್ಷದ ಬಾಲಕನಿದ್ದಾಗ ಆದದ್ದು. ಜನಪದ ಸೇವಾ ಟ್ರಸ್ಟ್ ಮೇಲುಕೋಟೆಯಲ್ಲಿ ಕರುಣಾಗೃಹ ಪ್ರಾರಂಭಿಸಿದಾಗ ರಾಜಣ್ಣ ಕೂಡ ಒಬ್ಬ ವಿದ್ಯಾರ್ಥಿಯಾಗಿ ಸೇರಿಕೊಂಡ. ಆಗ ಆತನಿಗೆ ಸುಮಾರು ಎಂಟು ವರ್ಷ ಇದ್ದಿರಬಹುದು. ತನ್ನ ವಯಸ್ಸಿಗೆ ಮೀರಿ ಚಟುವಟಿಕೆಯುಳ್ಳಂಥ ಬಾಲಕ. ಎಲ್ಲ ವಿಷಯಗಳಲ್ಲಿ ಧೈರ್ಯತೋರಿಸುವ ಮನೋವೃತ್ತಿ, ನಾಯಕತ್ವದ ಗುಣಗಳಿದ್ದವು. ಕರುಣಾಗೃಹದಲ್ಲಿದ್ದ ಒಂಟೆತ್ತಿನ ಶಾಲಾ ಗಾಡಿಯಲ್ಲಿ ಉಳಿದ ಮಕ್ಕಳನ್ನು ಕೂರಿಸಿಕೊಂಡು ಶಾಲೆಗೆ ಹೋಗುತ್ತಿದ್ದ. ಗಾಡಿಗೆ ಸ್ವತಃ ಎತ್ತು ಕಟ್ಟುತ್ತಿದ್ದ ಮತ್ತು ಬಿಚ್ಚುತ್ತಿದ್ದ. ಹುಡುಗರೆಲ್ಲಾ ಕುಳಿತ ಮೇಲೆ ತಾನು ನೆಗೆದು ಮುಂದೆ ಕುಳಿತುಕೊಂಡು ಸುರಕ್ಷಿತವಾಗಿ ಗಾಡಿ ಹೊಡೆದುಕೊಂಡು ಹೋಗುತ್ತಿದ್ದ. ಆಷಾಢಮಾಸದಲ್ಲಿ ತಾನೇ ಸ್ವತಃ ತನಗೂ ಮತ್ತು ಬೇರೆ ಮಕ್ಕಳಿಗೂ ಗಾಳಿಪಟ ಮಾಡಿಕೊಟ್ಟು ಎಲ್ಲರೊಡನೆ ಮೈದಾನದಲ್ಲಿ ಗಾಳಿಪಟ ಹಾರಿಸುತ್ತಿದ್ದ. ಮೋಟು ಕೈಗಳಲ್ಲಿ ಬುಗುರಿಗೆ ದಾರ ಸುತ್ತಿ ಬುಗುರಿ ಆಡಿಸುತ್ತಿದ್ದ. ಗಣೇಶ ಚತುರ್ಥಿ ಬಂದಾಗ ಅಂಥ ಕೈಗಳಿಂದಲೇ ಸುಂದರವಾದ ಗಣೇಶ ವಿಗ್ರಹ ತಯಾರಿಸುತ್ತಿದ್ದ. ಆ ವಿಗ್ರಹವನ್ನೇ ಕರುಣಾಗೃಹದಲ್ಲಿ ಸ್ಥಾಪಿಸಿ ಮಕ್ಕಳೆಲ್ಲರೂ ಪೂಜೆ ಮಾಡುತ್ತಿದ್ದರು. ಇದೆಲ್ಲಾ ಮಾಡುವಾಗ ರಾಜಣ್ಣನ ಸಂಭ್ರಮವೋ ಸಂಭ್ರಮ. ಕರುಣಾಗೃಹದಲ್ಲಿ ಇದ್ದುಕೊಂಡೇ ಎಸ್.ಎಸ್.ಎಲ್.ಸಿ ಮುಗಿಸಿಕೊಂಡು ಊರಿಗೆ ಹೋದ. ಈಗ ಈ ಬಾಲಕ ರಾಜಣ್ಣ ಕರ್ನಾಟಕ ರಾಜ್ಯದ

ಅಂಗವಿಕಲ ಇಲಾಖೆಯ ಕಮೀಷನರ್ ಆಗಿ ನಿಯುಕ್ತಗೊಂಡಿದ್ದಾರೆ. ರಾಜಣ್ಣನವರ ಈ ಉನ್ನತಿಗಾಗಿ ಕರುಣಾಗೃಹದ ಮಕ್ಕಳು ಮತ್ತು ಜನಪದ ಸೇವಾ ಟ್ರಸ್ಟ್ ಸಂತೋಷ ಪಡುತ್ತದೆ ಮತ್ತು ಅವರನ್ನು ಅಭಿನಂದಿಸುತ್ತದೆ.

ಕರುಣಾಗೃಹದ ಇನ್ನೋರ್ವ ವಿದ್ಯಾರ್ಥಿ ನರಸಿಂಹ. ಈತ ಪಾಂಡವಪುರ ತಾಲ್ಲೂಕು ಚಂದ್ರೆ ಗ್ರಾಮದ ನಿವಾಸಿ. ಈತ ಕರುಣಾಗೃಹದಲ್ಲಿ ಎಲ್ಲ ವಿದ್ಯಾರ್ಥಿಗಳಂತೆ ಆಟ ಪಾಠಗಳಲ್ಲಿ ಆಸಕ್ತಿ ತೋರಿಸುತ್ತಿದ್ದಲ್ಲದೆ ಓದುವುದರಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದ. ಆಗ ಟ್ರಸ್ಟ್ ನಡೆಸುತ್ತಿದ್ದ ಕಸ್ತೂರ ಬಾ ಸಂಕ್ಷಿಪ್ತ ಶಿಕ್ಷಣ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಓದಿ ಖಾಸಗಿಯಾಗಿ ಪರೀಕ್ಷೆ ಕಟ್ಟಿ ಅದರಲ್ಲಿ ಉತ್ತಮ ಫಲಿತಾಂಶದೊಂದಿಗೆ ತೇರ್ಗಡೆಯಾದ. ಹೊಸ ಜೀವನ ದಾರಿ ಕೇಂದ್ರದಲ್ಲಿಯೂ ಕೆಲ ಕಾಲ ಇದ್ದು ಅಲ್ಲಿ ವ್ಯವಸಾಯ ಮತ್ತು ಇನ್ನಿತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ. ತನ್ನ ದೇಹಬಲ ಮತ್ತು ಮನೋಬಲ ಗುರುತಿಸಿಕೊಂಡು ಮುಂದಿನ ವ್ಯಾಸಂಗಕ್ಕಾಗಿ ಮೈಸೂರಿಗೆ ಹೋಗಿ ಎಂ.ಎ. ಪದವೀಧರನಾದ. ಅದೇ ವೇಳೆಗೆ ಟ್ರಸ್ಟ್ ಪ್ರಾರಂಭಿಸಿದ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದರು. ಅವರ ಪ್ರಾಂಶುಪಾಲತ್ವದ ಅವಧಿಯಲ್ಲಿ ಕಾಲೇಜಿಗೆ ಸ್ವಂತಕಟ್ಟಡವಾಯಿತು. ಅವರ ಈ ಸಾಧನೆಗೆ ಟ್ರಸ್ಟ್ ಹೆಮ್ಮೆ ಪಡುತ್ತದೆ. ಕರುಣಾಗೃಹದ ಹಳೆಯ ವಿದ್ಯಾರ್ಥಿಗಳಲ್ಲಿ ಸಮಾಜದಲ್ಲಿ ಹಿರಿಯ ಸ್ಥಾನ ಪಡೆದ ವಿದ್ಯಾರ್ಥಿ ನರಸಿಂಹ.

ಎಂ.ಎಸ್.ಶಿವಕುಮಾರ ವಿಶೇಷ ಸಾಧನೆಯನ್ನು ಸಾಧಿಸಿದ ಕರುಣಾಗೃಹದ ವಿದ್ಯಾರ್ಥಿಗಳಲ್ಲಿ ಇನ್ನೊಬ್ಬ. ಈತ ಮಂಡ್ಯ ಬಳಿ ಇರುವ ಸಬ್ಬನಹಳ್ಳಿ ಗ್ರಾಮದವನು. ಕರುಣಾಗೃಹದಲ್ಲಿದ್ದಾಗ ಕೈತೋಟ ಮಾಡುವುದು, ಅಡಿಗೆ ಕೆಲಸದಲ್ಲಿ ನೆರವಾಗುವುದು, ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಂಡು ವಿದ್ಯಾಭ್ಯಾಸ ಮಾಡಿದ. ಕ್ರೀಡೆಯಲ್ಲಿ ವಿಶೇಷ ಆಸಕ್ತಿ ಇತ್ತು. ಕಬಡ್ಡಿ, ಕ್ರಿಕೆಟ್ ಮುಂತಾದ ಆಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ. ಕರುಣಾಗೃಹದಲ್ಲಿ ವಿದ್ಯಾಭ್ಯಾಸ ಮುಗಿಸಿದ ಮೇಲೆ ಕಂಪ್ಯೂಟರ್ ಕಲಿತು ಪ್ರಸಿದ್ಧ ಕಂಪನಿಗಳಲ್ಲಿ ಕೆಲಸ ಮಾಡಿದ. ಕೆಲಸಮಾಡುತ್ತಲೇ ಅಂಗವಿಕಲರ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಪಡೆಯತೊಡಗಿದ. ಮುಂದೆ ಅವನಿಗೆ ಕ್ರೀಡೆಗಳ ಮೂಲಕ ವಿದೇಶಗಳಿಗೆ ಹೋಗುವ ಅವಕಾಶವು ದೊರೆಯಿತು. ಇಂಗ್ಲೆಂಡಿಗೂ ಸಹ ಹೋಗಿದ್ದ. ತನ್ನ ಊರಲ್ಲಿ ಕುರಿಸಾಕಣೆಯಂಥ ಉದ್ಯೋಗವನ್ನು ಮಾಡಿದ. ಈಗ ಶಿವಕುಮಾರ ಕೈಗಾರಿಕೋದ್ಯಮಿಯಾಗಿದ್ದಾರೆ. ಜೊತೆಗೆ ನಾಲ್ಕಾರು ಕೆಲಸಗಾರರಿಗೂ ಉದ್ಯೋಗ ಕೊಟ್ಟಿದ್ದಾರೆ.

ಕೈಗಾರಿಕೋದ್ಯಮಿಯಾಗಿ ಸಮಾಜದಲ್ಲಿ ಉನ್ನತ ಸ್ಥಾನ ಪಡೆದಿದ್ದಾರೆ. ಆಕಾಶವಾಣಿಯಲ್ಲಿ ಅವರ ಸಂದರ್ಶನವೂ ಬಿತ್ತರಗೊಂಡಿದೆ. ಸಂಸಾರಸ್ಥನಾಗಿ ಹೆಣ್ಣು ಮಗುವಿನ ತಂದೆಯಾದ. ಶಿವಕುಮಾರರ ಈ ಸಾಧನೆ ಬಗ್ಗೆ ಜನಪದ ಸೇವಾ ಟ್ರಸ್ಟ್ ಅಭಿಮಾನ ಪಡುತ್ತದೆ.

ಅನ್ನದಾನಿ ಇನ್ನೋರ್ವ ಕರುಣಾಗೃಹದ ಹಳೆಯ ವಿದ್ಯಾರ್ಥಿ. ಆತನ ಇನ್ನೊಂದು ಹೆಸರು ಅಂತೋಣಿ. ಕೊಳ್ಳೇಗಾಲ ತಾಲ್ಲೂಕಿನ ಒಂದು ಬಡಕುಟುಂಬದಿಂದ ಬಂದ ವಿದ್ಯಾರ್ಥಿ. ವಿದ್ಯಾಭ್ಯಾಸದ ಜೊತೆಗೆ ಕರುಣಾಗೃಹದ

ಹಲವಾರು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಮತ್ತು ಶ್ರದ್ಧೆಯಿಂದ ಭಾಗವಹಿಸುತ್ತಿದ್ದವ. ಎಸ್.ಎಸ್.ಎಲ್.ಸಿ ಪಾಸು ಮಾಡಿಕೊಂಡ ಮೇಲೆ ಜನಪದ ಸೇವಾ ಟ್ರಸ್ಟ್‌ನಲ್ಲಿ ಉಳಿದುಕೊಂಡ. ಬೇರೆಲ್ಲಾ ಹುಡುಗರು ತಮ್ಮ ತಮ್ಮ ಭವಿಷ್ಯವನ್ನು ಅರಿಸಿಕೊಂಡು ತಮ್ಮ ತಮ್ಮ ಊರುಗಳಿಗೆ ಹೋದರೆ ಅನ್ನದಾನಿಯು ಟ್ರಸ್ಟ್‌ನಲ್ಲೇ ಇದ್ದುಕೊಂಡು ಕಾರ್ಯಕರ್ತನಾಗಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಬಂದ. ಮುಂದೆ ಟ್ರಸ್ಟ್ ಪ್ರಾರಂಭಿಸಿದ ಕಾಲೇಜಿನಲ್ಲಿ ಗುಮಾಸ್ತನಾಗಿ ಸೇರಿಕೊಂಡ. ಕಾಲೇಜಿನ ಕಛೇರಿ ಕೆಲಸ ನಿರ್ವಹಿಸಲು ಪ್ರಾರಂಭಿಸಿದ. ತನ್ನ ಪ್ರಾಮಾಣಿಕತೆ, ನಿಷ್ಠೆ ಮತ್ತು ಶ್ರದ್ಧೆ ಹಾಗೂ ಸುಂದರವಾದ ಕೈಬರಹದ ಕಾರಣದಿಂದಾಗಿ ಎಲ್ಲರ ಮೆಚ್ಚುಗೆಗೆ ಪ್ರೀತಿಯ ಪಾತ್ರನಾಗ ಅನ್ನದಾನಿ ಅಂತೋಣಿಯೆಂದೇ ಮೇಲುಕೋಟೆ ಜನರಿಗೆ ಪರಿಚಿತರಾಗಿದ್ದಾರೆ. ಒಂದು ಹೆಣ್ಣು ಮಗುವಿನ ತಂದೆಯಾದ ಅಂತೋಣಿ ಈಗ ಜನಪದ ಸೇವಾ ಟ್ರಸ್ಟ್‌ನ ಕಛೇರಿಯ ಪ್ರಮುಖ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಟ್ರಸ್ಟಿನ ಎಲ್ಲಾ ಲೆಕ್ಕ ಪತ್ರಗಳನ್ನು ಅಚ್ಚುಕಟ್ಟಾಗಿ ಇಟ್ಟು ಆಡಿಟ್‌ರವರ ಮತ್ತು ಸಂಬಂಧಿಸಿದವರೆಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮೈಸೂರಿನ ಜಿ.ರಾಚಪ್ಪ ಕರುಣಾಗೃಹದ ಮೊದಲ ಬ್ಯಾಚ್‌ನ ವಿದ್ಯಾರ್ಥಿ. ನಡೆಯಲು ಸಾಧ್ಯವಾಗದೆ ಇದ್ದರೂ ಕೂಡ ಮಹತ್ಕಾರ್ಯಗಳನ್ನು ಸಾಧಿಸುವ ಛಲವಿದ್ದ ವಿದ್ಯಾರ್ಥಿ. ತನ್ನ ದೈಹಿಕ ಶಕ್ತಿ ಮತ್ತು ಬುದ್ಧಿಶಕ್ತಿಯನ್ನು ಸಮನ್ವಯ ಗೊಳಿಸಿ ರಾಚಪ್ಪ ಮಾಡದೇ ಇದ್ದ ಕೆಲಸ ಯಾವುದೂ ಇರಲಿಲ್ಲ. ಸಶಕ್ತರು ಮತ್ತು ಸಮರ್ಥರು ಕೂಡ ನಾಚಿಕೆ ಪಡುವಂತೆ ರಾಚಪ್ಪನ ಕಾರ್ಯವೈಖರಿ ಇತ್ತು. 'ಹೊಸ ಜೀವನ ದಾರಿ'ಯಲ್ಲಿ ಕೂಡ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಕೆಲಸ ಮಾಡಿದವ. ೧೯೯೦ರಲ್ಲಿ ಮೇಲುಕೋಟೆಯಲ್ಲಿ ಕರ್ನಾಟಕ ಸರ್ವೋದಯ ಮಂಡಲಿ ಆಯೋಜಿಸಿದ್ದ ಅಖಿಲ ಭಾರತ ಸರ್ವೋದಯ ಸಮ್ಮೇಳನ ಕಾರ್ಯ ಕಲಾಪಗಳಲ್ಲಿ ರಾಚಪ್ಪನವರ ಪಾತ್ರ ಅದ್ವಿತೀಯವಾಗಿತ್ತು. ಎಸ್.ಎಸ್.ಎಲ್.ಸಿ ತೇರ್ಗಡೆಯಾದನಂತರ ಮೈಸೂರು ನಗರದಲ್ಲಿ ವಿಕ್ರಾಂತ್ ಟೈರ್ಸ್ ಕಂಪನಿಗೆ ಸೇರಿದರು. ಅಲ್ಲಿಯೂ ಕೂಡ ತಮ್ಮ ಕಾರ್ಯ ದಕ್ಷತೆಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ನಗರದಲ್ಲಿರುವ ಅಂಗವಿಕಲರ ಹಿತಕ್ಕಾಗಿ ಒಂದು ಸಂಸ್ಥೆಯನ್ನು ಕಟ್ಟಿದರು. ಸಂಸಾರಿಯಾಗಿದ್ದುಕೊಂಡು ಮೈಸೂರು ನಗರದಲ್ಲಿ ಗೌರವಯುತ ಸ್ಥಾನಪಡೆದಿರುವ ರಾಚಪ್ಪನವರ ಬಗ್ಗೆ ಟ್ರಸ್ಟ್ ವಿಶೇಷವಾಗಿ ಹೆಮ್ಮೆ ಪಡುತ್ತದೆ.

ಈ ರೀತಿಯಾಗಿ ಕರುಣಾಗೃಹದ ಹಳೆಯ ವಿದ್ಯಾರ್ಥಿಗಳಾದ ರಾಜಣ್ಣ, ನರಸಿಂಹ, ಶಿವಕುಮಾರ, ಅಂತೋಣಿ, ರಾಚಪ್ಪ, ಹನುಮಂತ ಮುಂತಾದವರ ಸಾಧನೆಯ ನೆನಪು ಜನಪದ ಸೇವಾ ಟ್ರಸ್ಟ್‌ನ ೫೪ ವರ್ಷಗಳ ಸೇವಾ ಅವಧಿಯ ಜೀವನದಲ್ಲಿ ಸದಾ ಹಸಿರಾಗಿರುತ್ತದೆ.

* * *

ಖಾದಿ ವಿಚಾರ

ಖಾದಿ ಒಂದು ವಿವಾದಾತ್ಮಕ ವಿಷಯ. ನಾನು ಖಾದಿ ಪ್ರತಿಪಾದನೆ ಮಾಡುವುದರಿಂದ ಬಿರುಗಾಳಿಯ ವಿರುದ್ಧ ಹಡಗನ್ನು ನಡೆಸುತ್ತಿದ್ದೇನೆ, ಸ್ವರಾಜ್ಯವೆಂಬ ಈ ಹಡಗನ್ನು ಮುಳುಗಿಸಿಬಿಡುತ್ತೇನೆ, ಎಂದು ಅನೇಕರು ಅಂದುಕೊಂಡಿದ್ದಾರೆ. ದೇಶವನ್ನು ಕತ್ತಲೆಯ ಯುಗಕ್ಕೆ ಕೊಂಡೊಯ್ಯುತ್ತಿದ್ದೇನೆ ಎನ್ನುತ್ತಿದ್ದಾರೆ. ಖಾದಿಯ ಪರವಾಗಿ ಸಾಕಷ್ಟು ಬೇರೆಡೆ ಹೇಳಿರುವುದರಿಂದ ಇಲ್ಲಿ ಮತ್ತೆ ಹೇಳುವುದಿಲ್ಲ. ಇಲ್ಲಿ ನಾನು ಹೇಳಬಯಸುವುದು ಪ್ರತಿಯೊಬ್ಬ ಕಾಂಗ್ರೆಸಿಗ ಭಾರತೀಯ ಖಾದಿ ಮುಂದೆ ಬರಲು ಏನು ಮಾಡಬೇಕೆಂಬುದು. ಇದು ದೇಶದ ಆರ್ಥಿಕ ಸ್ವಾತಂತ್ರ್ಯ ಹಾಗೂ ದೇಶದ ಎಲ್ಲರೂ ಸಮಾನರು ಎಂಬ ಭಾವದ ಆರಂಭ. ಖಾದಿ ಎಂದರೆ ಸಂಪೂರ್ಣ ಸ್ವದೇಶಿ ಮನೋಭಾವ. ಪ್ರತಿಯೊಬ್ಬರೂ ತಮ್ಮ ಜೀವನದ ಪ್ರತಿಯೊಂದು ಅಗತ್ಯವನ್ನೂ ನಮ್ಮ ಗ್ರಾಮೀಣ ಜನರ ಪರಿಶ್ರಮ ಮತ್ತು ಬುದ್ಧಿಮತ್ತೆಯ ಮೂಲಕ ಪೂರೈಸಿಕೊಳ್ಳಬೇಕೆಂಬ ದೃಢನಿಶ್ಚಯ ಮಾಡಬೇಕು. ಅಂದರೆ, ಈಗಿನ ಧೋರಣೆಗೆ ತದ್ವಿರುದ್ಧವಾಗಿರಬೇಕು. ಈಗಿನಂತೆ, ಭಾರತದ ಕೆಲವು ನಗರಗಳು ಮತ್ತು ಬ್ರಿಟನ್ ನಮ್ಮ ಏಳು ಲಕ್ಷ ಹಳ್ಳಿಗಳ ನಾಶ ಮತ್ತು ಶೋಷಣೆಯ ಮೇಲೆ ನಿಂತಿರುವುದನ್ನು ಬಿಟ್ಟು ಹಳ್ಳಿಗಳು ಸರ್ವಸ್ವತಂತ್ರವಾಗಿ ಸ್ವಂತ ಇಚ್ಛೆಯಿಂದ ಭಾರತದ ನಗರಗಳ ಮತ್ತು ಹೊರಜಗತ್ತಿನ ಸೇವೆ ಮಾಡಲು ಸಿದ್ಧವಾಗುವ ಸ್ಥಿತಿ ಬರಬೇಕು. ಇದರಿಂದ ಎರಡೂ ಕಡೆಯವರಿಗೂ ಲಾಭವಾಗಬೇಕು.

ಇದಕ್ಕೆ ಬಹುಸಂಖ್ಯಾತರ ಮನೋಭಾವ ಮತ್ತು ಅಭಿರುಚಿಯಲ್ಲಿ ಕ್ರಾಂತಿಕಾರಕ ಮಾರ್ಪಾಡು ಅಗತ್ಯ. ಅಹಿಂಸಾ ಮಾರ್ಗ ಕೆಲವು ಕ್ಷೇತ್ರಗಳಲ್ಲಿ ಸುಲಭ ಎನಿಸಿದರೆ, ಕೆಲವಲ್ಲಿ ಅದು ಬಹಳ ಕಷ್ಟ. ಈ ಮಾರ್ಗ ಅನುಸರಿಸುವುದರಿಂದ ಪ್ರತಿಯೊಬ್ಬ ಭಾರತೀಯನೂ ತನ್ನೊಳಗಿನ ಒಂದು ನಿಗೂಢ ಶಕ್ತಿಯನ್ನು ಕಂಡುಕೊಂಡು ಪ್ರಕಾಶಮಾನವಾಗಿ ತನ್ನ ಭಾರತೀಯ ಅಸ್ಮಿತೆಯ ಬಗ್ಗೆ ಹೆಮ್ಮೆಪಡುವಂತಾಗುತ್ತದೆ. ಅಹಿಂಸೆ ಎಂಬುದು ನಾವು ಈವರೆಗೆ ತಿಳಿದುಕೊಂಡಿರುವಂತೆ ನಿಸ್ಸಾರವಾದುದಲ್ಲ. ಅದು ಮಾನವ ಕುಲದ ಅಸ್ತಿತ್ವಕ್ಕೆ ಅಗತ್ಯವಾದ ಅತಿ ಪ್ರಬಲವಾದ ಶಕ್ತಿ. ಈ ಶಕ್ತಿಯನ್ನು ನಾನು ಕಾಂಗ್ರೆಸ್ ಮೂಲಕ ಜಗತ್ತಿನ ಮುಂದೆ ತೆರೆದಿಡಲು ಪ್ರಯತ್ನಿಸಿದ್ದೇನೆ. ಖಾದಿ ನನಗೆ ಭಾರತದ ಜನ ಸಮೂಹದ ಐಕ್ಯತೆಯ ಸಂಕೇತ. ನಮ್ಮ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆಯ ಸಂಕೇತ. ಜವಾಹರ್‌ಲಾಲ್ ನೆಹರೂನ ಕಾವ್ಯಮಯ ಮಾತಿನಲ್ಲಿ ಇದು 'ಸ್ವಾತಂತ್ರ್ಯ ಭಾರತದ ತೊಡುಗೆ'.

ಖಾದಿ ಮನೋಭಾವ ಎಂದರೆ ಜೀವನದ ಅಗತ್ಯವಸ್ತುಗಳ ಉತ್ಪಾದನೆ ಮತ್ತು ವಿತರಣೆಯಲ್ಲಿ ಸಂಪೂರ್ಣ ವಿಕೇಂದ್ರೀಕರಣ. ಇದರ ಅಡಿಪಾಯದ ಸೂತ್ರವೆಂದರೆ, ಪ್ರತಿಯೊಂದು ಹಳ್ಳಿಯೂ ತನ್ನ ಅವಶ್ಯಕತೆಗಳನ್ನೆಲ್ಲಾ ಪೂರೈಸಿಕೊಂಡ ನಂತರ ನಗರಗಳ ಅವಶ್ಯಕತೆಗಳಿಗೆಂದು ಒಂದಷ್ಟು ಹೆಚ್ಚು ಉತ್ಪಾದನೆ ಮಾಡುವುದು.

ಖಾದಿ ಉತ್ಪಾದನೆ ಹತ್ತಿ ಬೆಳೆಸುವುದರಿಂದ ಹಿಡಿದು ಅರಳೆ ಮಾಡಿ ಅದನ್ನು ಹಿಂಜಿ, ಹಂಜಿಗಳನ್ನು ಮಾಡಿ, ನೂಲುವುದು, ಬಣ್ಣ ಹಾಕುವುದು, ನೇಯ್ಗೆ, ಎಲ್ಲವೂ ಸೇರಿರಬೇಕು. ಈ ಪ್ರತಿಯೊಂದು ಕ್ರಮವೂ ಹಳ್ಳಿಯಲ್ಲೇ ನಡೆಯಬೇಕು. ಇಂದು ಅನೇಕ ಪ್ರದೇಶಗಳಲ್ಲಿ, ಅ.ಭಾ.ನೂ.ಸಂ.ನ ಸೇವಾ ಕ್ಷೇತ್ರದಲ್ಲಿ ಸೇರಿರುವ ಹಳ್ಳಿಗಳಲ್ಲೆಲ್ಲ, ಹೀಗೆ ನಡೆಯುತ್ತಿದೆ ಕೂಡ. ಸುಮಾರು ೧೩,೪೫೧ ಹಳ್ಳಿಗಳಲ್ಲಿ ೨,೭೫,೧೪೬ ಜನರು (ಇವರಲ್ಲಿ ೧೯,೬೪೫ ದಲಿತರು ಮತ್ತು ೫೭,೩೭೮ ಮುಸಲ್ಮಾನರು) ಇದ್ದಾರೆ. ಸನ್೧೯೪೦ರಲ್ಲಿ ತಮ್ಮ ನೂಲುವಿಕೆ ಮತ್ತು ನೇಯ್ಗೆಯ ಕೆಲಸಕ್ಕೆ ರೂ ೩೪,೮೫,೬೦೯ಗಳ ವೇತನ ಪಡೆದಿದ್ದಾರೆ. ನೂಲುವವರಲ್ಲ ಮುಕ್ಕಾಲು ಪಾಲು ಮಹಿಳೆಯರಿದ್ದಾರೆ.

ಪ್ರತಿ ಕಾಂಗ್ರೆಸ್ಸಿಗ ಪ್ರಾಮಾಣಿಕವಾಗಿ ಖಾದಿಯ ಕೆಲಸ ಕೈಗೊಂಡಿದ್ದರೆ, ಇದಕ್ಕೆ ನೂರು ಪಟ್ಟು ಉತ್ಪಾದನೆ ಮತ್ತು ಸಂಪಾದನೆಯಾಗುತ್ತಿತ್ತು.

ಈ ಅತಿ ಮುಖ್ಯ ಉದ್ಯೋಗವನ್ನು ಹಾಳುಗೆಡವಿರುವುದರಿಂದ ಇದಕ್ಕೆ ಹೊಂದಿಕೊಂಡಿದ್ದ ಕರಕುಶಲತೆ, ಬುದ್ಧಿಮತ್ತೆ ಮತ್ತು ಮೇಧಾವಿತನವೆಲ್ಲ ಹಳ್ಳಿಗಳನ್ನು ತೊರೆದು ಓಡಿ ಹೋಗಿವೆ. ಈಗ ಈ ಹಳ್ಳಿಗಳು ಮಂಕು ಕವಿದು, ಬುದ್ಧಿ ಹೀನವಾಗಿ, ಅಲ್ಲಿಯ ಬಡಕಲು ದನಗಳಂತೆಯೇ ದೈನೇಸಿ ಸ್ಥಿತಿ ತಲುಪಿವೆ.

ಇಷ್ಟು ಹೇಳಿದ ನಂತರ ಗಾಂಧೀ ಹತ್ತಿಯಿಂದ ನೂಲುವವರೆಗಿನ ಕಾರ್ಯವಿಧಾನದ ಪ್ರತಿಹೆಜ್ಜೆಯನ್ನು ವಿವರಿಸಿ, ಎಲ್ಲಕ್ಕಿಂತ ಸರಳ ಮತ್ತು ಉತ್ತಮ ಉಪಕರಣಗಳು ಯಾವವು ಏಕೆ ಅವುಗಳನ್ನು ಉಪಯೋಗಿಸ ಬೇಕು ಎಂದು ಸವಿಸ್ತಾರವಾಗಿ ತಿಳಿಸಿದ್ದಾರೆ. ನಂತರ ಹೀಗೆ ಉದ್ಗರಿಸಿದ್ದಾರೆ.

"ನಮ್ಮ ದೇಶದಲ್ಲಿ ದೈಹಿಕ ಶ್ರಮ ಮತ್ತು ಬುದ್ಧಿವಂತಕೆ ಎರಡು ಕವಲಾಗಿ ಹೋಗಿವೆ. ಇದರಿಂದ ದೇಶ ನಿಂತನೀರಿನಂತೆ ಕೊಳೆಯುತ್ತಿದೆ".

ಕೊನೆಯದಾಗಿ ಹೇಳುತ್ತಾರೆ: ಈ ದೇಶವ್ಯಾಪಿ ನೂಲುವ ಯಜ್ಞಕ್ಕೆ ಪ್ರತಿಯೊಬ್ಬ ಮಹಿಳೆ ಮತ್ತು ಪುರುಷ ದಿನದಲ್ಲಿ ಒಂದು ಗಂಟೆಗಿಂತ ಹೆಚ್ಚಿನ ಸಮಯ ಕೂಡ ಬೇಕಾಗಿಲ್ಲ. ಇಡೀ ದೇಶವೇ ಈ ರೀತಿ ನೂಲುತ್ತಿರುವ ಚಿತ್ರವನ್ನು ಕಲ್ಪಿಸಿಕೊಳ್ಳಿ. ಇದರ ಶೈಕ್ಷಣಿಕ ಹಾಗೂ ಐಕ್ಯತೆ ತರಿಸುವ ಪರಿಣಾಮವನ್ನು ಊಹಿಸಿಕೊಳ್ಳಿ, ಸಾಧಾರಣ ಕೂಲಿ, ಕಾರ್ಮಿಕ, ಧಮನಿಕ, ಯಜಮಾನ ಎಲ್ಲರ ನಡುವೆ ಒಂದು ಸಮಾನತೆಯ ನಂಟು ಉಂಟುಮಾಡುವ ಶಕ್ತಿ ಈ ಕಾರ್ಯಕ್ರಮಕ್ಕಿದೆ.

(ಗಾಂಧಿಯ ಉಯಿಲು ಎಂದು ಹೇಳಲಾಗುವ, 'ರಚನಾತ್ಮಕ ಕಾರ್ಯಕ್ರಮ'ದ ೧೯೪೫ನೇ ಅವೃತ್ತಿಯಿಂದ ಆಯ್ದ ಭಾಗ) – ಸಂಗ್ರಹ – ಕೃಪಾ

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಸ್.ಎಚ್.ಜೋಷಿ; ಶ್ರೀ ಎನ್.ಎಸ್.ಸುಬ್ಬಣ್ಣ – ಬೆಂಗಳೂರು
ಶ್ರೀ ನಾಗಮಂಗಲ ಕೃಷ್ಣಮೂರ್ತಿ; ಪ್ರೊ॥ ಎಚ್.ಎಲ್.ಕೇಶವಮೂರ್ತಿ – ಮಂಡ್ಯ
ಶ್ರೀ ಟಿ.ರಂಗಶೆಟ್ಟಿ – ಎಲೆಚಾಗಹಳ್ಳಿ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು – ಭಾರತೀನಗರ
ಶ್ರೀ ಎಚ್.ಪಿ.ಮೋಹನ್ – ಮಂಡ್ಯ
ಶ್ರೀ ಬಸವರಾಜ ಹೂಗಾರ – ಕಾಜುಬಾಗ
ಡಾ॥ ಸುಂದರ್ ಕೇನಾಜೆ – ಸುಳ್ಯ
ಶ್ರೀ ಆರ್.ಆರ್.ಮಂಗಳವೇಡೆ – ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ



KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ.

ಶ್ರೀ. ರಮೇಶ್.ಸ.ಕಿಕ್ಕೇರಿ
#110, 11ನೇ ಕ್ರಾಸು
4ನೇ ಮೇನ್,
ವಿದ್ಯಾರಣ್ಯಪುರಂ
ಮೈಸೂರು--570008

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.